
# ಸುಧರ್ಮ

## 6

## ರೈತ ಉತ್ಪಾದಕ ಸಂಸ್ಥೆಗಳ ಕಾನೂನಾತ್ಮಕ ಅನುಸರಣೆಗಳು






**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**

ತೋಟಗಾರಿಕೆ ಇಲಾಖೆ – ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ಕರ್ನಾಟಕ ಸರ್ಕಾರ

ಸಹಯೋಗ

ಮಹಿಳಾ ಅಭಿವೃದ್ಧಿ ಸೊಸೈಟಿ [ಎಪಿಎಮ್ಎಎಸ್] – ಹೈದ್ರಾಬಾದ


BOD
Meeting
agenda

# ಸುಧರ್ಮ 6

## ರೈತ ಉತ್ಪಾದಕ ಸಂಸ್ಥೆಗಳ ಕಾನೂನಾತ್ಮಕ ಅನುಸರಣೆಗಳು

ಆಡಳಿತ ಮಂಡಳಿ ಸದಸ್ಯರಿಗೆ
ಕಲಿಕಾ ಕೈಪಿಡಿ




**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**

ತೋಟಗಾರಿಕೆ ಇಲಾಖೆ – ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ಕರ್ನಾಟಕ ಸರ್ಕಾರ

ಸಹಯೋಗ

ಮಹಿಳಾ ಅಭಿವೃದ್ಧಿ ಸೊಸೈಟಿ [ಎಪಿಎಮ್ಎಎಸ್] – ಹೈದ್ರಾಬಾದ

# ಸುಧರ್ಮ

# ರೈತ ಉತ್ಪಾದಕ ಸಂಸ್ಥೆಗಳ ಕಾನೂನಾತ್ಮಕ ಅನುಸರಣೆಗಳು


| | | |
|---|---|---|
| ಪ್ರಥಮ ಮುದ್ರಣ | : | 2020 |
| ಪ್ರತಿಗಳು | : | 1000 |
| ಬೆಲೆ | : | ರೂ.150.00 |
| ಪ್ರಕಾಶಕರು | : | ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.<br>ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಆವರಣ,<br>ಜಿ.ಕೆ.ವಿ.ಕೆ. ಅಂಚೆ, ಬೆಂಗಳೂರು – 560 065.<br>ಮಿಂಚಂಚೆ : coefpo@gmail.com<br>ಜಾಲತಾಣ : www.coefpo.org<br>ದೂರವಾಣಿ : + 91 - 080 - 29721577 |

ಸಹಯೋಗ:

ಈ ತರಬೇತಿ ಮಾರ್ಗದರ್ಶಿಯನ್ನು ಮಹಿಳಾ ಅಭಿವೃದ್ಧಿ ಸೊಸೈಟಿ ಹಾಗೂ ಡಿ.ಜಿ.ಆರ್.ವಿ. ಜರ್ಮನಿ ಇವರಿಂದ ಮುದ್ರಿಸಲಾದ **ಲೀಗಲ್ ಕಾಂಪ್ಲಿಯೇನ್ಸ್ ಆಫ್ ಫಾರ್ಮಾರ್ ಪ್ರೊಡ್ಯೂಸರ್ ಆರ್ಗನೈಜೇಷನ್ – ಸುಧರ್ಮ** ಎಂಬ ತರಬೇತಿ ಮಾರ್ಗದರ್ಶಿಯ ಇಂಗ್ಲೀಷ್ಅವತರಣಿಕೆಯನ್ನು ಕನ್ನಡಕ್ಕೆ ಭಾಷಾಂತರಿಸಿ ಅಗತ್ಯತೆಗೆಅನುಸಾರವಾಗಿ ಮಾರ್ಪಾಡು ಮಾಡಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟಕೇಂದ್ರ, ಬೆಂಗಳೂರು ಇವರಿಂದ ಮುದ್ರಿಸಲಾಗಿದೆ.



ಸಂಕಲನ

ಡಾ.ಜಿ. ಬಸವರಾಜ್, ಉಪ ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಡಾ.ಅಶೋಕ ಎಸ್. ಆಲೂರ, ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಡಾ.ಕೆ.ಜೆ.ಪರಮೇಶ್ವರಪ್ಪ, ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಡಾ. ಇಟಗಿ ಪ್ರಭಾಕರ್, ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಡಾ.ಎಸ್. ಕುಮಾರ್.ಹಿರಿಯ ಫೆಲೊ, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಶ್ರೀ. ಮಂಜುನಾಥ ಎಂ., ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಡಾ.ಶಶಿಭೂಷಣ ಅ. ಘಟ್ನಟ್ಟಿ, ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

# ಮುನ್ನುಡಿ

ಕೃಷಿ ಹಾಗೂ ತೋಟಗಾರಿಕೆ ಕ್ಷೇತ್ರಗಳು ದೇಶದಆರ್ಥಿಕತೆಯ ಪ್ರಮುಖಆಧಾರ ಸ್ಥಂಭಗಳಲ್ಲಿ ಒಂದಾಗಿದ್ದು, ಗ್ರಾಮೀಣ ಪ್ರದೇಶದ ಕೃಷಿ ಆಧಾರಿತ ಸಮುದಾಯಗಳಿಗೆ ಆದಾಯ, ಉದ್ಯೋಗ, ಆಹಾರ ಹಾಗೂ ಪೌಷ್ಠಿಕಾಂಶದ ಭದ್ರತೆಯ ಮೂಲವಾಗಿವೆ. ದೇಶದ ಜನಸಂಖ್ಯೆಯ ಮೂರನೇ ಎರಡರಷ್ಟು ಪ್ರಮಾಣದ ಜನಸಂಖ್ಯೆಯು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ ಮೇಲೆ ಅವಲಂಬಿತರಾಗಿದ್ದಾರೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಂತ್ರಜ್ಞಾನ ಮಾಹಿತಿ, ಬಂಡವಾಳ ಮತ್ತು ಮಾರುಕಟ್ಟೆಯ ಮಾಹಿತಿ ಹಾಗೂ ಸೌಲಭ್ಯಗಳ ಹಲವಾರು ಸವಾಲುಗಳನ್ನು ಎದುರುಸುತ್ತಿರುವುದು ಒಂದಡೆಯಾದರೇ ಮತ್ತೊಂದೆಡೆ, ಆಹಾರ ಸಂಸ್ಕರಣಾ ಘಟಕಗಳಿಗೆ ಕೃಷಿ ಅವಲಂಬಿತ ಕಚ್ಚಾ ವಸ್ತುಗಳನ್ನು ರೈತರಿಂದ ನೇರವಾಗಿ ಖರೀದಿಸಲು ಹೆಚ್ಚಿನ ವಹಿವಾಟು ವೆಚ್ಚದಿಂದಾಗಿ ನಷ್ಟವಾಗುತ್ತದೆ ಇದರಿಂದಾಗಿ ಆಹಾರ ಸರಬರಾಜು ಸರಪಳಿ ಅಸಮರ್ಥವಾಗುತ್ತಲಿದೆ. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತಉತ್ಪಾದಕ ಸಂಸ್ಥೆಗಳ ರಚನೆ ಹಾಗೂ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ದೇಶದಲ್ಲಿ ಕಂಪನಿ ಕಾಯ್ದೆಗೆ ತಿದ್ದುಪಡಿತರುವ ಮೂಲಕ ರೈತಉತ್ಪಾದಕ ಸಂಸ್ಥೆಗಳನ್ನು ಈ ಕಾಯ್ದೆಯಅಡಿಯಲ್ಲಿ ನೋಂದಾಯಿಸುವ ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ಕೃಷಿಯನ್ನು ಒಂದು ಉದ್ದಿಮೆ ರೂಪದಲ್ಲಿ ನೋಡುವಂತಹ ಚಿಂತನೆಗೆ ಚಾಲನೆ ನೀಡಿದಂತಾಗಿದೆ. ಈ ವರ್ಷದ ಕೇಂದ್ರ ಆಯವ್ಯಯದಲ್ಲಿ ಸುಮಾರು 10000 ರೈತಉತ್ಪಾದಕ ಸಂಸ್ಥೆಗಳನ್ನು ರಚಿಸಲು ಅವಶ್ಯಕ ತಂತ್ರವನ್ನು ರೂಪಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿಯೂ ಸಹ ರೈತ ಉತ್ಪಾದಕ ಸಂಸ್ಥೆಗಳ ಉತ್ತೇಜನ, ಅಭಿವೃದ್ಧಿ ಹಾಗೂ ಮೌಲ್ಯ ಸರಪಳಿಯಲ್ಲಿ ಅವುಗಳನ್ನು ವಿವಿಧ ಸಂಸ್ಥೆಗಳ ಜೊತೆಗೆ ಸಂಬಂಧಕಲ್ಪಿಸುವ ಮೂಲಕ ಅವುಗಳು ಸ್ವತಂತ್ರ ವ್ಯವಹಾರಿಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಪೂರಕವಾಗುವಂತೆ ಕರ್ನಾಟಕ ರೈತ ಉತ್ಪಾದಕ ಸಂಸ್ಥೆಗಳ ನೀತಿ 2018ನ್ನು ಜಾರಿಗೆ ತರಲಾಗಿದೆ. ರಾಜ್ಯದ ವಿವಿಧ ಅಭಿವೃದ್ಧಿ ಇಲಾಖೆಗಳು, ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಯಕಾರ್ಯಕ್ರಮವನ್ನು ಹಮ್ಮಿಕೊಂಡಿವೆ.

ಹೆಚ್ಚುತ್ತಿರುವ ರೈತಉತ್ಪಾದಕ ಸಂಸ್ಥೆಗಳ ಸಂಖ್ಯೆಗಳ ದೃಷ್ಟಿಯಿಂದ, ರೈತಉತ್ಪಾದಕ ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ಅಗತ್ಯವಾಗಿರುತ್ತದೆ. ರೈತಉತ್ಪಾದಕ ಸಂಸ್ಥೆಗಳನ್ನು ಪ್ರೋತ್ಸಾಹಿಸಿದ ಹಲವಾರು ಸಂಸ್ಥೆಳಾದ (ನಬಾರ್ಡ್), ಎಸ್‌ಎಫ್‌ಎಸಿ, ರಾಜ್ಯ ಅಭಿವೃದ್ಧಿ ಇಲಾಖೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ, ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರ ಮಂಡಳಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ತಾಂತ್ರಿಕ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಕೇಂದ್ರದಿಂದ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದ್ದರೂ, ರೈತ ಉತ್ಪಾದಕ ಸಂಸ್ಥೆಗಳ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ವಿವಿಧ ಪಾಲುದಾರರಿಗೆ ಅದರಲ್ಲಿಯೂ ಮುಖ್ಯವಾಗಿ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಿಗೆ ಸರಳ ಮತ್ತು ಸ್ಪಷ್ಟವಾದ ವಿಷಯಗಳನ್ನು ಒಳಗೊಂಡಿರುವ ತರಬೇತಿ ಕೈಪಿಡಿಗಳ ತಯಾರಿಕೆಯ ಅಗತ್ಯವನ್ನು ಅರಿತುಕೊಂಡು, ಹಲವಾರು ತರಬೇತಿ ಕೈಪಿಡಿಗಳನ್ನು ಪ್ರಕಟಿಸುವ ಉತ್ಕೃಷ್ಟಕೇಂದ್ರದ ಪ್ರಯತ್ನ ಶ್ಲಾಘನೀಯ. ಈ ತರಬೇತಿ ಕೈಪಿಡಿ ಒಂದು ಉಪಯುಕ್ತ ಕೈಪಿಡಿಯಾಗಿ ಉಪಯೋಗವಾಗುವದೇಂಬುದು ನಮ್ಮಆಶಯ.

**ಆಯುಕ್ತರು**
**ಜಲಾನಯನ ಅಭಿವೃದ್ದಿ ಇಲಾಖೆ**

# ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಿಗೆ ಸ್ವಯಂ ಕಲಿಕಾ ಮಾಡ್ಯೂಲ್‌ನ ಉಪಯುಕ್ತತೆ.

ಭಾರತದ ಕೃಷಿ ಕ್ಷೇತ್ರದ ಸೂಕ್ಷ್ಮ ಅವಲೋಕನ ಮಾಡಿದಾಗ ಭಾರತೀಯ ಕೃಷಿಕರು ಎದುರಿಸುತ್ತಿರುವ ಹಲವಾರು ಸವಾಲುಗಳು ನಮಗೆ ಗೋಚರವಾಗುತ್ತವೆ. ಈ ಎಲ್ಲ ಸವಾಲುಗಳ ಮಧ್ಯೆಯು ಸ್ವತಂತ್ರ ನಂತರದ ವರ್ಷಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ ಶ್ರೇಯಸ್ಸು ಈ ದೇಶದ ರೈತ ಸಮುದಾಯಕ್ಕೆ ಸಲ್ಲುತ್ತದೆ. ಚೀನಾದೇಶವನ್ನು ಹೊರತುಪಡಿಸಿದರೆ ಅತೀ ಹೆಚ್ಚು ಸಂಖ್ಯೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಹೊಂದಿದ ನಮ್ಮ ದೇಶದಲ್ಲಿ ಅವರ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇಂತಹ ಪ್ರಮುಖ ಕಾರ್ಯಕ್ರಮಗಳಲ್ಲಿ ರಾಷ್ಟ್ರಾದ್ಯಂತ ರೈತ ಉತ್ಪಾದಕ ಸಂಸ್ಥೆಗಳನ್ನು ಉತ್ತೇಜಿಸಿ ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಪ್ರಯತ್ನಗಳನ್ನು ಮಾಡುತ್ತಲಿವೆ. ಕೇಂದ್ರ ಸರ್ಕಾರವು 2020 ಆಯವ್ಯಯ ಘೋಷಣೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ತೇಜನಕ್ಕಾಗಿ ವಿಶೇಷ ತಂತ್ರವನ್ನು ಕೂಡ ಪ್ರಕಟಿಸಿದೆ. ಕರ್ನಾಟಕದಲ್ಲಿ ರಾಜ್ಯ ಸರ್ಕಾರವು ರೈತ ಉತ್ಪಾದಕ ಸಂಸ್ಥೆಗಳ ನೀತಿಯನ್ನು 2018 ರಲ್ಲಿಯೇ ಬಿಡುಗಡೆ ಮಾಡುವ ಮೂಲಕ ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆಗೆ ತನ್ನದೇ ಆದ ವಿಶೇಷ ಯೋಜನೆಯನ್ನು ಹಾಕಿಕೊಂಡಿದೆ. ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಒಟ್ಟಾರೆ ಅಭಿವೃದ್ಧಿಗಾಗಿ ಮತ್ತು ಅದರಲ್ಲಿಯೂ ವಿಶೇಷವಾಗಿ ಈ ಸಂಸ್ಥೆಗಳ ವಿವಿಧ ಪದಾಧಿಕಾರಿಗಳಿಗೆ ತರಬೇತಿ ಮಾರ್ಗದರ್ಶನ ನೀಡಲು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಿದೆ. ರಾಜ್ಯದಲ್ಲಿ ಸ್ಥಾಪಿತವಾದ ಹಲವಾರು ರೈತ ಉತ್ಪಾದಕ ಸಂಸ್ಥೆಗಳ ಪದಾಧಿಕಾರಿಗಳಿಗೆ, ರೈತ ಸದಸ್ಯರಿಗೆ ಹಾಗೂ ರೈತ ಉತ್ಪಾದಕ ಸಂಸ್ಥೆಗಳನ್ನು ಉತ್ತೇಜಿಸುವ ಅಭಿವೃದ್ಧಿ ಇಲಾಖೆಗಳ ವಿವಿಧ ಅಧಿಕಾರಿಗಳಿಗೆ ತರಬೇತಿ ಹಾಗೂ ಮಾರ್ಗದರ್ಶನವನ್ನು ಉತ್ಕೃಷ್ಟ ಕೇಂದ್ರದಿಂದ ನೀಡಲಾಗುತ್ತಿದೆ. ಈ ದಿಶೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳು ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ ಹಲವಾರು ವಿಷಯಗಳ ಬಗ್ಗೆ ತರಬೇತಿ ಕೈಪಿಡಿಗಳನ್ನು ವಿವಿಧ ಅನುಭವಿ ಸಂಸ್ಥೆಗಳ ಸಹಯೋಗದೊಂದಿಗೆ ಪ್ರಕಟಿಸುವ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ತೆಲಂಗಾಣರಾಜ್ಯದ ಮಹಿಳಾ ಅಭಿವೃದ್ಧಿ ಸೊಸೈಟಿ ಮಧುಮೂರ್ತಿ ಹಾಗೂ ಶ್ರೀಮತಿ ರಾಮಲಕ್ಷ್ಮಿ ಅವರಿಂದ ತಯಾರಿಸಲಾದ **ಲೀಗಲ್ ಕಾಂಪ್ಲಿಯೇನ್ಸ್ ಆಫ್ ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಜೇಷನ್ – ಸುಧರ್ಮ** ಕುರಿತ ತರಬೇತಿ ಕೈಪಿಡಿಯ ಆಧಾರದ ಮೇಲೆ ಈ ಕಲಿಕಾ ಮಾಡ್ಯೂಲ್‌ನ್ನು ಪ್ರಕಟಿಸಲಾಗಿದೆ. ಕರ್ನಾಟಕರಾಜ್ಯದಲ್ಲಿ ಸ್ಥಾಪಿತವಾದ ಎಲ್ಲ ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ನಿದೇಶಕರುಗಳು ಈ ಕಲಿಕಾ ಕೈಪಿಡಿಯಉಪಯೋಗವನ್ನು ಪಡೆಯುವರೆಂಬುದು ನಮ್ಮ ಆಶಯವಾಗಿದೆ. ಈ ಪ್ರಕಟಣೆಯನ್ನು ಹೊರತರುವಲ್ಲಿ ಸಹಭಾಗಿತ್ವ ನೀಡಿದ ಮಹಿಳಾ ಅಭಿವೃದ್ಧಿ ಸೊಸೈಟಿ, ಜಿ.ಐ.ಝಡ್ ಬೆಂಗಳೂರು, ಮೈರಾಡಾ, ಡಬ್ಲುಹೆಚ್‌ಹೆಚ್ ಡಿ.ಜಿ.ಆರ್.ವಿ ಹಾಗೂ ಸ್ಕಿಲ್ ಇಂಡಿಯಾಇವರಿಗೆ ವಿಶೇಷವಾದ ಕೃತಜ್ಞತೆಯನ್ನು ಸಲ್ಲಿಸುತ್ತಾ ಅವರ ಕೊಡುಗೆಯನ್ನು ಈ ಮೂಲಕ ದಾಖಲಿಸಲಿಚ್ಛಿಸುತ್ತೇನೆ.

**ನಿರ್ದೇಶಕರು**

**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**

**ಬೆಂಗಳೂರು**

# ಪರಿವಿಡಿ


| ಕ್ರ. ಸಂ. | ವಿವರ | ಪುಟ ಸಂಖ್ಯೆ |
|---|---|---|
| I | ಕಲಿಕಾ ಕೈಪಿಡಿಯ ಕುರಿತು | 06 |
| II | ಸಂಕ್ಷಿಪ್ತಾಕ್ಷರಗಳು | 08 |
| III | ಮೂಲ ಸಮೀಕ್ಷೆ | 11 |
| 1. | ಕಾನೂನು ಅನುಸರಣೆಯ – ಪದ್ದತಿ ಮತ್ತು ಲಾಭಗಳು | 12 |
| 2. | ಕಂಪನಿ ಕಾಯ್ದೆ 2013 ಅಡಿಯಲ್ಲಿ ನೊಂದಣಿಯಾದ ರೈತ ಉತ್ಪಾದಕ ಸಂಸ್ಥೆಗಳು ಅನುಸರಿಸಬೇಕಾದ ಕಾನೂನು ಅನುಸರಣೆಗಳು | 17 |
| 3. | ಕಾನೂನಾತ್ಮಕ ಪರವಾನಗಿಗಳು ಮತ್ತು ದಾಖಲೆಗಳು | 20 |
| | ಅಂತಿಮ ಸಮೀಕ್ಷೆ | 29 |

# ಕಲಿಕಾ ಕೈಪಿಡಿಯ ಬಗ್ಗೆ

**ನಿರ್ದೇಶಕರ ಮಂಡಳಿಯ ಕಲಿಕೆ ಮಾಡ್ಯುಲ**

1. ಜಾಗೃತಿ– ರೈತ ಉತ್ಪಾದಕರ ಸಂಸ್ಥೆಗಳು: ಪರಿಚಯ ಮತ್ತು ಉದ್ದೇಶ
2. ಪರಿಕಲ್ಪನಾ – ಸಾಂಸ್ಥಿಕ ರಚನೆ ಮತ್ತು ರೈತ ಉತ್ಪಾದಕರ ಸಂಸ್ಥೆಗಳ ವಿನ್ಯಾಸ
3. ವಿನಿಮಯ– ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಸದಸ್ಯತ್ವ
4. ಪ್ರೇರಣ – ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಆಡಳಿತ
5. ಸಮರ್ಥನ – ರೈತ ಉತ್ಪಾದಕರ ಸಂಸ್ಥೆಗಳ ನಿರ್ವಹಣೆ
6. **ಸಮರ್ಥ– ರೈತಉತ್ಪಾದಕ ಸಂಸ್ಥೆಗಳ ಕಾನೂನು ಅನುಸರಣೆ**
7. ವ್ಯಾಪಾರ ಯೋಜನೆ
8. ಲೆಕ್ಕ ಪತ್ರ ನಿರ್ವಹಣೆ ಮತ್ತು ಹಣಕಾಸು
9. ಕೋಯ್ಲೋತ್ತರ ಚಟುವಟಿಕೆ, ಸರಬರಾಜು ಸರಪಣಿ ನಿರ್ವಹಣೆ.
10. ಮಾರುಕಟ್ಟೆ ನಿರ್ವಹಣೆ
11. ಕೃಷಿಯಲ್ಲಿ ಉತ್ಪಾದಕತೆ ಹೆಚ್ಚಿಸುವ ಸೇವೆಗಳು
12. ನಾಯಕತ್ವ

ರೈತ ಉತ್ಪಾದಕ ಸಂಸ್ಥೆಗಳಲ್ಲಿ ಕಾನೂನ್ಮಾತಕ ಅನುಸರಣೆಗಳ ಕುರಿತಾದ ಈ ಕೈಪಿಡಿಯ ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರ ಮಂಡಳಿಯ ಸದಸ್ಯರ ಸ್ವಯಂ ಕಲಿಕೆಯ ಕೈಪಿಡಿಗಳ ಸರಣಿಯ ಆರನೇ ಕೈಪಿಡಿಯಾಗಿದೆ. ಕಾನೂನು ಅನುಸರಣೆಗಳು ಈ ಕೈಪಿಡಿಯು ಕಾನೂನುಗಳ ಬಗ್ಗೆ ಅವರುಗಳ ತಿಳುವಳಿಕೆನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ.

**ಉದ್ದೇಶ**

ರೈತ ಉತ್ಪಾದಕ ಸಂಸ್ಥೆಗಳು ನಿರ್ದೇಕರ ಮಂಡಳಿಯ ಸದಸ್ಯರು ತಮ್ಮ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಲು ಮತ್ತು ರೈತ ಉತ್ಪಾದಕ ಸಂಸ್ಥೆಗಳನ್ನು ಅದರ ಸದಸ್ಯರ ಲಾಭಕ್ಕಾಗಿ ವಿಭಿನ್ನ ಆಯಾಮಗಳಲ್ಲಿ ಮುನ್ನಡೆಸುವ ಸಲುವಾಗಿ ಅವಶ್ಯವಿರುವ ವಿಚಾರಗಳನ್ನು ಮಂಡಳಿಯ ಸದಸ್ಯರು ಅರ್ಥೈಸಿಕೊಳ್ಳಲು ಮತ್ತು ತಿಳಿದುಕೊಳ್ಳಲು ಈ ಕೈಪಿಡಿಯ ನೆರವಾಗುತ್ತದೆ.

**ಉದ್ದೇಶಿತ ಗುಂಪು**

ಈ ಕೈಪಿಡಿಯು ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರ ಮಂಡಳಿಯ ಸದಸ್ಯರನ್ನು ಗುರಿಯಾಗಿರಿಸಿಕೊಂಡಿದೆ, ನಿರ್ದೇಶಕ ಮಂಡಳಿ ಸದಸ್ಯರು ತಮ್ಮ ರೈತ ಉತ್ಪಾದಕ ಸಂಸ್ಥೆ ಆಡಳಿತದಲ್ಲಿ ಕನಿಷ್ಠ ಒಂದು ವರ್ಷದ ಅನುಭವ ಹೊಂದಿರುವರನ್ನು ಗಮನದಲ್ಲಿ ಇಟ್ಟುಕೊಂಡು ರಚಿಸಲಾಗಿದೆ.

**ಕಲಿಕೆಯ ಉದ್ದೇಶಗಳು**

ಕಾನೂನು ಅನುಸರಣೆಗಳ ಈ ಕೈಪಿಡಿಯು ಪ್ರಮುಖ ಕಲಿಕೆಯ ಉದ್ದೇಶಗಳು;

- ರೈತ ಉತ್ಪಾದಕ ಸಂಸ್ಥೆಗಳಿಗೆ ಕಾನೂನು ಅನುಸರಣೆಗಳ ಅಗತ್ಯತೆ ಮತ್ತು ಪ್ರಯೋಜನೆಗಳ ಬಗ್ಗೆ ಅರಿವು ಮೂಡಿಸುವುದು.
- ಕಂಪನಿ ಕಾಯ್ದೆ ಅಡಿಯಲ್ಲಿ ಪಾಲಿಸಬೇಕಾದ ಕಾನೂನು ಅನುಸರಣೆಗಳ ಬಗ್ಗೆ ಪರಿಚಯಿಸಲು.
- ರೈತ ಉತ್ಪಾದಕ ಸಂಸ್ಥೆಗಳ ಅಗತ್ಯವಿರುವ ವಿವಿಧ ರೀತಿಯ ಪರವಾನಗಿಗಳು ಮತ್ತು ದಾಖಾಲೆಗಳ ಬಗ್ಗೆ ತಿಳಿದುಕೊಳ್ಳಲು.

**ರಚನೆ ಹಾಗೂ ವಿಷಯಗಳು**

ಉದ್ದೇಶದಲ್ಲಿ ತಿಳಿಸಿದಂತೆ, ಈ ಕೈಪಿಡಿಯು ನಿರ್ದೇಶಕ ಮಂಡಳಿಯ ಸದಸ್ಯರಿಗೆ ಕಾನೂನು ಅನುಸರಣೆಗಳ ಅಗತ್ಯತೆ ಮತ್ತು ಪ್ರಾಮುಖ್ಯತೆಯ ಬಗ್ಗೆ ಸದಸ್ಯರಿಗೆ ಅಗತ್ಯವಾದ ತಿಳುವಳಿಕೆ ನೀಡುವುದರೊಂದಿಗೆ ಪ್ರಾರಂಭವಾಗುತ್ತದೆ. ನಂತರ ನೋಂಧಣಿ ಕಾಯ್ದೆಯಲ್ಲಿ ಅನುಸರಿಸ ಬೇಕಾದ ಕಾನೂನುಗಳು, ಅವುಗಳ ಅನುಸರಣೆ, ಬೇಕಾಗಿರುವ ವಿವಿಧ ಪರವಾನಗಿಗಳು ಹಾಗೂ ದಾಖಲೆಗಳ ಬಗ್ಗೆ ತಿಳಿಸುತ್ತವೆ.

**ಉಪಯೋಗಿಸುವ ರೀತಿ**

ನಿರ್ದೇಶಕ ಮಂಡಳಿಯ ಸದಸ್ಯರುಗಳು ಈ ಕೈಪಿಡಿಯನ್ನು ಸ್ವಯಂ ಆಗಿ ಉಪಯೋಗಿಸಬಹುದು ಅಥವಾ ಬಾಹ್ಯ ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಿಕೊಳ್ಳಬಹುದು ಈ ಕೈಪಿಡಿಯ ಜೊತೆಗೆ ವಿಷಯಕ್ಕೆ ಸಂಬಂಧಿಸಿದ ಭಿತ್ತಿಚಿತ್ರಗಳು ಚಾರ್ಟ್‌ಗಳನ್ನು ನೀಡಲಾಗಿದೆ. ಇವುಗಳನ್ನು ಸೂಕ್ತ ಸ್ಥಳಗಳಲ್ಲಿ ಪ್ರದರ್ಶಿಸಬಹುದು.

ಈ ಕೈಪಿಡಿಯ ಕಲಿಕೆಯನ್ನು ನೀವು ಆನಂದಿಸುತ್ತಿರಿ ಮತ್ತು ನಿಮ್ಮ ರೈತ ಉತ್ಪಾದಕ ಸಂಸ್ಥೆಯ ಆಡಳಿತವನ್ನು ಹೆಚ್ಚಿನ ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ನಿಭಾಯಿಸುತ್ತಿರಿ ಎಂದು ನಾವು ಆಶೀಸುತ್ತೇವೆ.

# II. ಸಂಕ್ಷಿಪ್ತಾಕ್ಷರಗಳು

**ಆರ್ಟಿಕಲ್ಸ್ ಆಪ್ ಅಸೋಷಿಯೇಷನ್ಸ್** : ಇದು ಸಹಕಾರಿ ಸಂಘಗಳಿಗೆ ಉಪ ನಿಯಮಗಳಿದ್ದಂತೆ ಉತ್ಪಾದಕರ ಕಂಪನಿಗಳಿಗೆ ಸಂಘದ ಪರಿಚ್ಛೇದಗಳಿರುತ್ತದೆ. ಸಂಘದ ಪರಿಚ್ಛೇದವು ಕಂಪನಿಯ ಕಾರ್ಯನಿರ್ವಹಣೆಯ ನಿಬಂಧನೆಗಳನ್ನು ಸೂಚಿಸುತ್ತದೆ ಮತ್ತು ಕಂಪನಿಯ ಉದ್ದೇಶವನ್ನು ಹಾಗು ಉದ್ದೇಶವನ್ನು ಸಾಧಿಸುವ ಮಾರ್ಗ ಮತ್ತು ವಿಧಾನಗಳನ್ನು ವ್ಯಾಖ್ಯಾನಿಸುತ್ತದೆ.

ಮಂಡಳಿಯು ಸಂಘದ ಪರಿಚ್ಛೇದಗಳನ್ನು ಸಿದ್ಧಪಡಿಸಬೇಕು ಮತ್ತು ಅದನ್ನು ಕಂಪನಿಗಳ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು. ಇದರ ಯಾವುದೇ ತಿದ್ದುಪಡಿಯನ್ನು ಸಾಮಾನ್ಯ ಸಭೆಯಲ್ಲೇ ಮಾಡಬೇಕು ಮತ್ತು ಅದಕ್ಕೆ ಕಂಪನಿಗಳ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು.

**ವಾರ್ಷಿಕ ಸಾಮಾನ್ಯ ಸಭೆ** : ವಾರ್ಷಿಕ ಸಾಮಾನ್ಯ ಸಭೆ ಅಥವಾ ಸಾಮಾನ್ಯ ಸಭೆಯು ರೈತ ಉತ್ಪಾದಕ ಸಂಸ್ಥೆಗಳ ಎಲ್ಲಾ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಾಗಿರುತ್ತದೆ. ಈ ವಾರ್ಷಿಕ ಸಭೆಗಳನ್ನು ಯಾವುದೇ ಮುಖ್ಯ ನೀತಿ ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಅಂದರೆ ಲೆಕ್ಕ ಪರಿಶೋಧಿತ ಆರ್ಥಿಕ ವಿಚಾರಗಳು, ವಾರ್ಷಿಕ ಯೋಜನೆಗಳು, ಹೂಡಿಕೆ, ಬಂಡವಾಳ ಏರಿಕೆ, ಲೆಕ್ಕಪರಿಶೋಧಕರ ನೇಮಕಾತಿ, ಮಂಡಳಿ ನಿರ್ದೇಶಕರ ಚುನಾವಣೆ ಇವೇ ಮೊದಲಾದ ವಿಚಾರಗಳಿಗೆ ನಡೆಸಲಾಗುತ್ತದೆ.

**ರೈತ ಉತ್ಪಾದಕ ಮಾರುಕಟ್ಟೆ ಸಮಿತಿ ಲೈಸನ್ಸ್** : ಕೃಷಿ ಇಲಾಖೆಯ ಅಡಿಯಲ್ಲಿ ಬರುವ ರೈತ ಉತ್ಪಾದಕ ಮಾರುಕಟ್ಟೆ ಸಮಿತಿಯು ಈ ಲೈಸೆನ್ಸ್ ನೀಡುತ್ತವೆ.

**ಮಂಡಳಿ/ನಿರ್ದೇಶಕ ಮಂಡಳಿ/ ನಿರ್ದೇಶಕರು** : ಮಂಡಳಿಯು ರೈತ ಉತ್ಪಾದಕರ ಸಂಸ್ಥೆಗಳ ನೀತಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಮತ್ತು ಇದು ತನ್ನ ಸದಸ್ಯರಿಗಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಖಾತ್ರಿಪಡಿಸುವ ಆಡಳಿತ ಮಂಡಳಿಯಾಗಿದೆ. ರೈತ ಉತ್ಪಾದಕ ಸಂಸ್ಥೆಗಳ ಮಂಡಳಿಯು ಸಾಮಾನ್ಯ ಸಭೆಯಿಂದ ಅಂದರೆ ರೈತ ಉತ್ಪಾದಕ ಸಂಸ್ಥೆಯ ಸದಸ್ಯರಿಂದ ಚುನಾಯಿತರಾದವರಿಂದ ಕೂಡಿರುತ್ತದೆ.

**ಅಗ್‌ಮಾರ್ಕ** : ಭಾರತ ಸರ್ಕಾರದ, ಕೃಷಿ ಸಚಿವಾಲಯ ಮತ್ತು ರೈತರ ಕಲ್ಯಾಣ ಇಲಾಖೆಯ ಅಂಗಸಂಸ್ಥೆಯಾದ ಮಾರುಕಟ್ಟೆ ಮತ್ತು ಪರಿಶೀಲನಾ ನಿರ್ದೇಶನಾಲಯದಿಂದ ಉತ್ಪನ್ನಗಳಿಗೆ ನೀಡುವ ಗುಣಮಟ್ಟ ದೃಡೀಕರಣ ಪ್ರಮಾಣ ಪತ್ರವಾಗಿರುತ್ತದೆ.

**ಸಹಕಾರಿ ಸಂಘ** : ಸಹಕಾರಿ ಕಾಯ್ದೆಯಡಿ ನೊಂದಣಿಯಾದ ರೈತ ಉತ್ಪಾದಕ ಸಂಸ್ಥೆಗಳನ್ನು (ಉದಾ: ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959) ಸಹಕಾರಿ ಸಂಘಗಳೆಂದು ಕರೆಯುತ್ತಾರೆ.

**ಉಪನಿಯಮಗಳು** : ಉಪನಿಯಮಗಳು ಸಹಕಾರಿ ಸೊಸೈಟಿಗಳು ಕಾರ್ಯನಿರ್ವಹಣೆಯನ್ನು ಸಕ್ರಿಯಗೊಳಿಸುವ ನಿಯಮಗಳ ಗುಂಪು. ಪ್ರತಿಯೊಂದು ಸಹಕಾರಿ ಸೊಸೈಟಿಗಳು ತಮ್ಮ ಸ್ವಂತ ಉಪನಿಯಮಗಳನ್ನು ಹೊಂದಿರುತ್ತವೆ ಮತ್ತು ಸಹಕಾರಿ ಸೊಸೈಟಿಗಳ ಎಲ್ಲಾ ಕಾರ್ಯಚಟುವಟಿಕೆಗಳನ್ನು ಈ ಉಪನಿಯಮಗಳ ಅಡಿಯಲ್ಲೇ ತೆಗೆದುಕೊಳ್ಳಲಾಗುತ್ತದೆ.

ಮಂಡಳಿಯು ತನ್ನ ಉಪನಿಯಮಗಳನ್ನು ರೂಪಿಸಿ ಅದಕ್ಕೆ ಸಹಕಾರಿ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು. ಇದರ ಯಾವುದೇ ತಿದ್ದುಪಡಿಯನ್ನು ಸಾಮಾನ್ಯ ಸಭೆಯಲ್ಲೇ ಮಾಡಬೇಕು ಮತ್ತು ಅದಕ್ಕೆ ಸಹಕಾರಿ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು.

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ಮ್ಯಾನೇಜರ್ / ಜನರಲ್ ಮ್ಯಾನೇಜರ್** : ಪ್ರತಿಯೊಂದು ರೈತ ಉತ್ಪಾದಕರ ಸಂಸ್ಥೆಗಳು ಪೂರ್ಣಾವಧಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹೊಂದಿರಬೇಕು ಅಥವಾ ಯಾವುದೇ ಪದನಾಮದಲ್ಲಿ ಇರಬಹುದು (ಮ್ಯಾನೇಜರ್. ಜನರಲ್ ಮ್ಯಾನೇಜರ್ ಇತ್ಯಾದಿ). ಮುಖ್ಯ ನಿರ್ವಾಹಕ ಅಧಿಕಾರಿ ರೈತ ಉತ್ಪಾದಕರ ಸಂಸ್ಥೆಯ ಎಲ್ಲಾ ಚಟುವಟಿಕೆಗಳನ್ನು ಮಂಡಳಿಯ ನಿರ್ವಾಹಕತೆ, ನಿರ್ದೇಶನ ಮತ್ತು ನಿಯಂತ್ರಣದ ಅಡಿಯಲ್ಲಿ ನಿರ್ವಹಿಸಬೇಕು ಮತ್ತು ರೈತ ಉತ್ಪಾದಕರ ಸಂಸ್ಥೆಯ ಸಾಧನೆಗೆ ಉತ್ತರದಾಯಿತ್ವವನ್ನು ಹೊಂದಿರಬೇಕು.

**ರೈತ ಉತ್ಪಾದಕ ಸಂಸ್ಥೆ** : ರೈತ ಉತ್ಪಾದಕರ ಸಂಸ್ಥೆಯು ಅದರ ಕೃಷಿಕ ಸದಸ್ಯರ ಮಾಲಿಕತ್ವದ ಮತ್ತು ನಿಯಂತ್ರಣವನ್ನು ಹೊಂದಿದ ನೋಂದಾಯಿತಿ ಸಂಸ್ಥೆಯಾಗಿದೆ. ರೈತ ಉತ್ಪಾದಕರ ಸಂಸ್ಥೆಯ ಉದ್ದೇಶ, ತನ್ನ ಸದಸ್ಯರ ಸಾಮಾನ್ಯ ಬೇಡಿಕೆಗಳನ್ನು, ಅವರಿಗೆ ಅವಶ್ಯಕವಾಗಿರುವ ಸೇವೆಗಳನ್ನು ಒದಗಿಸುವ ಮೂಲಕ ಈಡೇರಿಸುವುದಾಗಿದೆ. ರೈತ ಉತ್ಪಾದಕ ಸಂಸ್ಥೆಗಳು ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರಬೇಕು. ರೈತ ಉತ್ಪಾದಕರ ಸಂಸ್ಥೆಗಳು ಔಪಚಾರಿಕ ಸಂಸ್ಥೆಗಳಾಗಿರುವುದರಿಂದ ಅವು ಕಛೇರಿ/ಮೂಲ ಸೌಕರ್ಯ, ಸಿಬ್ಬಂದಿ, ವ್ಯವಸ್ಥೆ ಮತ್ತು ಮಂಡಳಿಯ ನಿರ್ದೇಶಕರ ನಿಯಂತ್ರಣಕ್ಕೆ ಒಳಪಟ್ಟಿರಬೇಕು.

**ಬಾಡಿ ಕಾರ್ಪೋರೇಟ್** : ಮಾನ್ಯತೆ ಪಡೆದ ಹಾಗೂ ಗುರುತಿಸಲಾದ ಒಂದು ಘಟಕಕ್ಕೆ ಬಾಡಿ ಕಾರ್ಪೋರೇಟ್ ಎನ್ನುತ್ತಾರೆ. ಈ ಘಟಕವು ಯಾವುದೇ ತರಹದ ವ್ಯವಹಾರದ ಒಪ್ಪಂದ ಮಾಡಿಕೊಳ್ಳುವುದು, ಮೊಕದ್ದಮೆ ಹೂಡುವುದು, ಆಸ್ತಿಯನ್ನು ಕೊಳ್ಳುವುದು ಮತ್ತು ಮಾರಲು ಹಾಗೂ ಪಂಥಗಳ ಉದ್ದೇಶಗಳನ್ನು ಸಾಧಿಸಲು ಅಗತ್ಯವಿರುವ ಎಲ್ಲಾ ಇತರ ಕೆಲಸವನ್ನು ಮಾಡುವ ಅಧಿಕಾರವಿರುವ ಘಟಕ. ರೈತ ಉತ್ಪಾದಕ ಸಂಸ್ಥೆಗಳು ನೋಂದಾಣಿಯಾದ ನಂತರ ಬಾಡಿ ಕಾರ್ಪೋರೇಟ್‌ಗಳಾಗುತ್ತವೆ.

**ಸರಕು ಮತ್ತು ಸೇವಾ ತೆರಿಗೆ** : ಸರಕು ಮತ್ತು ಸೇವೆಗಳ ಮೇಲೆ ಭಾರತಾದ್ಯಂತ ಚಾಲ್ತಿಯಲ್ಲಿರುವ ಏಕರೂಪದ ಸಮಗ್ರ ತೆರಿಗೆ

**ಸಾಮಾನ್ಯ ಸಭೆಗಳು** : ರೈತ ಉತ್ಪಾದಕ ಸಂಸ್ಥೆಯ ಸಾಮಾನ್ಯ ಸಭೆಗಳು

**ಎಫ್.ಎಸ್.ಎಸ್.ಎ.ಐ** : ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಂಟುಬ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಭಾರತೀಯ ಆಹಾರ ಸುರಕ್ಷತೆ ಮತ್ತು ಪ್ರಮಾಣಿತ ಪ್ರಾಧಿಕಾರದಿಂದ ಆಹಾರ ಗುಣಮಟ್ಟದ ಬಗ್ಗೆ ನೀಡಲ್ಪಡುವ ಪ್ರಮಾಣ ಪತ್ರ ಇದಾಗಿದೆ. ಕೇಂದ್ರ ಸರ್ಕಾರವು ಆಹಾರದ ಗುಣಮಟ್ಟದ ಬಗ್ಗೆ ನೀತಿ ನಿಯಮಗಳನ್ನು ರೂಪಿಸುತ್ತದೆ.

**ಎಂ.ಎಸ್.ಎಂ.ಈ. ಪ್ರಮಾಣ ಪತ್ರ**: ರಾಜ್ಯದ ಕಾರ್ಮಿಕ ಇಲಾಖೆಯ ಅಡಿಯಲ್ಲಿ ಅತೀ ಸಣ್ಣ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಈ ಪ್ರಮಾಣ ಪತ್ರ ನೀಡಲಾಗುತ್ತದೆ.

**ಪಾನ್** : ವೈಯಕ್ತಿಕ ಮತ್ತು ಕಂಪನಿಗಳ ಆದಾಯ ತೆರಿಗೆಯನ್ನು ಪಾವತಿ ಮಾಡಲು ಆದಾಯ ತೆರಿಗೆ ಇಲಾಖೆಯಿಂದ ವೈಯಕ್ತಿಕ ಮತ್ತು ಕಂಪನಿಗಳಿಗೆ ನೀಡುವ ಒಂದು ವಿಶಿಷ್ಟ ಖಾಯಂ ಖಾತೆ ಸಂಖ್ಯೆ ಅಥವಾ ಪರಮನೆಂಟ್ ಅಕೌಂಟ್ ನಂಬರ್ ಇದಾಗಿರುತ್ತದೆ.

**ಉತ್ಪಾದಕ ಕಂಪನಿ** : ಕಂಪನಿ ಕಾಯ್ದೆ 2013ರ ಅಡಿಯಲ್ಲಿ ನೋಂದಾವಣಿಯಾದ ರೈತ ಉತ್ಪಾದಕ ಕಂಪನಿಯು, ಉತ್ಪಾದಕ ಕಂಪನಿಯಾಗಿರುತ್ತದೆ, ಅಲ್ಲದೇ ಕಂಪನಿ ಕಾಯ್ದೆ 2013ರ ಕಲಂ 581ಬಿ ಅಡಿಯಲ್ಲಿ ನಿರ್ದೇಶಿಸಲ್ಪಟ್ಟ ಉದ್ದೇಶ ಮತ್ತು ಚಟುವಟಿಕೆಗಳನ್ನು ನಿರ್ವಹಿಸಿಕೊಂಡು ಹೋಗುವ ಒಂದು ಸ್ವಾಯತ್ತ ಸಂಸ್ಥೆಯಾಗಿರುತ್ತದೆ.

**ಪಿ.ಜಿ.ಎಸ್.** : ಸಾವಯವ ಉತ್ಪನ್ನಗಳ ಗುಣಮಟ್ಟದ ಭರವಸೆಗೆ ಸ್ಥಳೀಯವಾಗಿ ಕಲ್ಪಿಸಲಾಗಿರುವ ಕೇಂದ್ರೀಕೃತ ವ್ಯವಸ್ಥೆ.

**ವಾರ್ಷಿಕ ರಿಟರ್ನ್‌ಗಳ ಫೈಲಿಂಗ್** : ವಾರ್ಷಿಕ ರಿಟರ್ನ ಫೈಲಿಂಗ್ ರೈತ ಉತ್ಪಾದಕ ಸಂಸ್ಥೆಯು ವಾರ್ಷಿಕವಾಗಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ (ಕಂಪನಿಗಳ ರಿಜಿಸ್ಟ್ರಾರ್/ ಸಹಕಾರಿ ಸಂಘಗಳ ರಿಜಿಸ್ಟ್ರಾರ್) ಸಂಸ್ಥೆಯ ವಾರ್ಷಿಕ ಆದಾಯದ ಜೊತೆಗೆ ಲೆಕ್ಕ ಪರಿಶೋಧಿತ ಹಣಕಾಸು ವರದಿ ಹಾಗೂ ಇತರೆ ಚಟುವಟಿಕೆಗಳ ವಿವರಗಳನ್ನು ಸಲ್ಲಿಸುವ ಪ್ರಕ್ರಿಯೆ.

**ತೆರಿಗೆ ಕಡಿತ ಅಥವಾ ತೆರಿಗೆ ಸಂಗ್ರಹ ಖಾತೆ ಸಂಖ್ಯೆ** : ಆದಾಯ ತೆರಿಗೆ ಇಲಾಖೆಯಿಂದ ನೀಡಲ್ಪಡುವ 10 ಸಂಖ್ಯೆಯ ಗುರುತಿನ ಸಂಖ್ಯೆ ಇದಾಗಿದ್ದು, ಈ ಸಂಖ್ಯೆಯು ತೆರಿಗೆ ಕಡಿತ ಅಥವಾ ತೆರಿಗೆ ಸಂಗ್ರಹ ಮಾಡುವ ಪ್ರತಿಯೊಬ್ಬರಿಗು ಅನ್ವಯಿಸುತ್ತದೆ.

# ಮೂಲ ಸಮೀಕ್ಷೆ

ಈ ಕೈಪಿಡಿಯು ರೈತ ಉತ್ಪಾದಕ ಸಂಸ್ಥೆಗಳಲ್ಲಿ ಕಾನೂನಾತ್ಮಕ ಅನುಸರಣೆಗಳು ಎಂಬ ವಿಷಯದ ಕುರಿತಾಗಿದೆ ಕೆಳಗೆ ನಾವು ಈ ವಿಷಯದ ಕುರಿತು ಉತ್ತರ ನೀಡಬೇಕಾದ ಕೆಲವು ಮೂಲ ಪ್ರಶ್ನೆಗಳನ್ನು ನೀಡಲಾಗಿದೆ. ಈ ಆರಂಭ ಸಮೀಕ್ಷೆಯ ಉದ್ದೇಶ ಈ ಪ್ರಶ್ನೆಗಳ ಕುರಿತು ನಮ್ಮ ಅರ್ಥೈಸುವಿಕೆಯನ್ನು ಕಂಡುಕೊಳ್ಳುವುದು ಮತ್ತು ಆ ಮೂಲಕ ರೈತ ಉತ್ಪಾದಕ ಸಂಸ್ಥೆಗಳಲ್ಲಿ ಕಾನೂನಾತ್ಮಕ ಅನುಸರಣೆಗಳು ಎಂಬುದರ ಕುರಿತು ಮತ್ತಷ್ಟು ಕಲಿತುಕೊಳ್ಳಲು ಯತ್ನಿಸುವುದು.

1.ರೈತ ಉತ್ಪಾದಕ ಸಂಸ್ಥೆಗಳು ಕಾನೂನುಗಳ ಅನುಸರಣೆ ಮಾಡುವ ಅವಶ್ಯಕತೆ ಏನು?

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

2.ರೈತ ಉತ್ಪಾದಕ ಸಂಸ್ಥೆಗಳಿಗೆ ಅಗತ್ಯವಿರುವ ವಿವಿಧ ಪರವಾನಗಿಗಳು ಮತ್ತು ದಾಖಲೆಗಳು ಯಾವುವು?

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

---------------------------------------------------------------------------------------------------------------

# 1

# ಕಾನೂನು ಅನುಸರಣೆಯ ಉದ್ದೇಶ ಮತ್ತು ಲಾಭಗಳು

## ಅಧಿವೇಶನದ ಉದ್ದೇಶ:



ರೈತ ಉತ್ಪಾದಕ ಸಂಸ್ಥೆಗಳು ಅನುಸರಿಸಬೇಕಾದ ಕಾನೂನು ಅನುಸರಣೆಗಳ ಅಂಶಗಳನ್ನು ತಿಳಿಯುವ ಮುನ್ನ ಕಾನೂನಾತ್ಮಕ ಅನುಸರಣೆಗಳನ್ನು ನಿಯಮಾನುಸಾರ ಪಾಲನೆ ಮಾಡಿದಲ್ಲಿ ಆಗುವ ಲಾಭಗಳು ಮತ್ತು ಅವಶ್ಯಕತೆಗಳ ಬಗ್ಗೆ ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

**ಪರಿವಿಡಿ**

1.ಕಾನೂನು ಅನುಸರಣೆಯ ಅಗತ್ಯತೆಗಳು.

2.ಕಾನೂನು ಅನುಸರಣೆಯಿಂದಾಗುವ ಪ್ರಯೋಜನಗಳು ಮತ್ತು ಲಾಭಗಳು.

**ಕಾನೂನು ಅನುಸರಣೆಯ ಅಗತ್ಯತೆಗಳು**

ಹಿಂದಿನ ಕೈಪಿಡಿಯಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಆಡಳಿತಕ್ಕೆ ಸಂಬಂಧಪಟ್ಟಂತೆ ಕಾನೂನು ಅನುಸರಣೆ ಪಾಲನೆಯು ಬಹಳ ಪ್ರಮುಖವಾದ ಅಂಶ. ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿ ನಿರ್ದೇಶಕರುಗಳು ಹಾಗೂ ಸದಸ್ಯರುಗಳು ಪಾಲನೆ ಮಾಡಬೇಕಾಗಿರುವ ಕಾನೂನು ಅನುಸರಣೆಗಳ ಕುರಿತು ವಿವರಿಸಲಾಗಿದೆ.

**ಚಟುವಟಿಕೆ**

ಈ ಕೆಳಗಿನ ಎರಡು ರೈತ ಉತ್ಪಾದಕ ಸಂಸ್ಥೆಗಳ ಪ್ರಕರಣಗಳನ್ನು ನೋಡೋಣ. ಎರಡು ಪ್ರಕರಣಗಳನ್ನು ವಿಶ್ಲೇಷಿಸಿ ಚರ್ಚಿಸಬೇಕಾಗಿದೆ.

ಎರಡು ವಿಧಧ ರೈತ ಉತ್ಪಾದಕ ಸಂಸ್ಥೆಗಳನ್ನು ವಿಶ್ಲೇಷಿಸಿ ಹಾಗೂ ಚರ್ಚಿಸಿ ಅವುಗಳ ಪರಿಣಾಮವನ್ನು ವಿವರಿಸಲಾಗಿದೆ.



**ರೈತ ಉತ್ಪಾದಕ ಸಂಸ್ಥೆ–1**


ಈ ರೈತ ಉತ್ಪಾದಕ ಸಂಸ್ಥೆಯಲ್ಲಿ ಪ್ರತಿ ವರ್ಷ ನಿಯಮಿತವಾಗಿ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ನಡೆಸಲಾಗುತ್ತಿದೆ. ಹಾಗೂ ವಿವಿಧ ವಹಿವಾಟುಗಳು ಮತ್ತು ಖಾಲಿ ಇರುವ ನಿರ್ದೇಶಕ ಹುದ್ದೆಗಳಿಗೆ ಆಯ್ಕೆ ಮೂಲಕ ಭರ್ತಿ ಮಾಡಲಾಗುತ್ತಿದೆ. ಕಳೆದ ವರ್ಷ ಧೀರ್ಘಕಾಲದ ಯೋಜನೆ ಹಾಗೂ ಸಂಸ್ಥೆಯ ಲಿಖಿತ ಕಾನೂನಿನ ತಿದ್ದುಪಡಿ ಸಂಬಂಧಪಟ್ಟ ಹಾಗೂ ಅದರ ಅನುಮೋದನೆಗೆ ವಿಶೇಷ ಸಾಮಾನ್ಯ ಸಭೆಯನ್ನು ಕೂಡ ನಡೆಸಲಾಗಿತ್ತು.

ಪ್ರತಿ ತಿಂಗಳು 5ನೇ ತಾರೀಖಿನಂದು ಆಡಳಿತ ಮಂಡಳಿಯ ಸಭೆಗಳನ್ನು ನಡೆಸಲಾಗುತ್ತದೆ. ಈ ಸಂಸ್ಥೆಯಲ್ಲಿ ಆಡಳಿತ ಮಂಡಳಿ ಮುಖ್ಯ ಕಾರ್ಯನಿರ್ವಣಾಧಿಕಾರಿಯನ್ನು ನೇಮಕಾತಿ ಮಾಡಲಾಗಿರುತ್ತದೆ. ಪ್ರತಿ ಆರ್ಥಿಕ ವರ್ಷದ ಕೊನೆಯಲ್ಲಿ ಶಾಸನ ಬದ್ಧ ಲೆಕ್ಕಪರಿಶೋಧನೆ, ವಾರ್ಷಿಕ ಆದಾಯ, ಜಿ,ಎಸ್,ಟಿ, ತೆರಿಗೆ ಪಾವತಿ ಮತ್ತು ಶಾಸನ ಬದ್ಧ ದಾಖಲಾತಿಗಳನ್ನು ಕಾಲ ಕಾಲಕ್ಕೆ ನಿರ್ವಹಿಸಲಾಗಿರುತ್ತದೆ.

**ರೈತ ಉತ್ಪಾದಕ ಸಂಸ್ಥೆ–2**

ಈ ರೈತ ಉತ್ಪಾದಕ ಸಂಸ್ಥೆಯಲ್ಲಿ ಆಡಳಿತ ಮಂಡಳಿಯ ಸಭೆಗಳನ್ನು ಸಮಯಕ್ಕೆ ಸರಿಯಾಗಿ ನಡೆಸಿಕೊಂಡು ಬಂದಿರುವುದಿಲ್ಲ. ಕಳೆದ ವರ್ಷದ ಸರ್ವ ಸದಸ್ಯರ ಸಾಮಾನ್ಯ ಸಭೆಯೂ ಕೂಡ ನಡೆದಿರುವುದಿಲ್ಲ ಹಾಗೂ ವಾರ್ಷಿಕ ಆದಾಯದ ವರದಿಯನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ (ಆರ್.ಓ.ಸಿ.) ಸಲ್ಲಿಸಲು ಮರೆತಿರುತ್ತಾರೆ. ಶಾಸನ ಬದ್ಧ ಲೆಕ್ಕಪರಿಶೋಧನೆಯನ್ನು ತರಾತುರಿಯಲ್ಲಿ ಸಾಮಾನ್ಯ ಸಭೆಯ ಒಂದೆರಡು ದಿನ ಇರುವಾಗ ಮಾಡಿಸಿರುತ್ತಾರೆ. ಲೆಕ್ಕ ಪತ್ರಗಳು ಹಾಗೂ ದಾಖಲಾತಿಗಳನ್ನು ಸರಿಯಾಗಿ ನಿರ್ವಹಿಸಿಕೊಂಡು ಬಂದಿರುವುದಿಲ್ಲ. ತ್ರೈಮಾಸಿಕ ಒಂದರಲ್ಲಿ ಯಾವುದೇ ರೀತಿಯ ವ್ಯವಹಾರದ ವಹಿವಾಟವನ್ನು ನಡೆಸಿರುವುದಿಲ್ಲವೆಂದು ಆ ತ್ರೈಮಾಸಿಕದ ಜಿ.ಎಸ್.ಟಿ. ದಾಖಲಾತಿಯನ್ನು ಮಾಡಿರುವುದಿಲ್ಲ.

ರೈತ ಉತ್ಪಾದಕ ಸಂಸ್ಥೆಗಳ ಪರಿಚಯ ಮತ್ತು ತರ್ಕಬದ್ದತೆ ಕೈಪಿಡಿಯಲ್ಲಿ ತಿಳಿಸಿದಂತೆ ರೈತ ಉತ್ಪಾದಕ ಸಂಸ್ಥೆಗಳು ಕಂಪನಿ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವುದರಿಂದ, ಈ ಸಂಸ್ಥೆಗಳು ಹಾಗೂ ಅವುಗಳ ಚಟುವಟಿಕೆಗಳು ದೇಶದ ಸಾಂವಿಧಾನಿಕ ಚೌಕಟ್ಟಿನಲ್ಲಿ ರೂಪಿಸಲಾದ ಕಾನೂನಿನ ನಿಯಂತ್ರಣದಲ್ಲಿ ಕರ್ತವ್ಯ ನಿರ್ವಹಿಸ ಬೇಕಾಗಿರುತ್ತದೆ. ಆದುದ್ದರಿಂದ, ರೈತ ಉತ್ಪಾದಕ ಸಂಸ್ಥೆಗಳು ಕಾನೂನು ಅನುಸರಣೆ ಮಾಡುವುದು ಅತೀ ಅವಶ್ಯಕವಾಗಿದ್ದು, ಇದರ ಅನುಸರಣೆಯು ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.



**ಕಾನೂನು ಅನುಸರಣೆಯಿಂದಾಗುವ ಪ್ರಯೋಜನೆಗಳು ಅಥವಾ ಲಾಭಗಳು**

- ✶ ಖರೀದಿದಾರರ ಕಟಬಾಕಿ, ವ್ಯವಹಾರದ ಪ್ರತಿಸ್ಪರ್ಧಿಗಳಿಂದ ಕಾನೂನು ಕ್ರಮಗಳು ಉಗ್ರಾಣಗಳ ಮೇಲೆ ಜಾಗೃತ ದಳದ ದಾಳಿಗಳಂತಹ ಪ್ರಸಂಗಗಳಿಂದ ಸುರಕ್ಷಿತವಾಗಿರಬಹುದು.
- ✶ ಸೂಕ್ತ ರೀತಿಯಲ್ಲಿ ದಾಖಲಾತಿಗಳ ನಿರ್ವಹಣೆ ಸೂಕ್ತ ರೀತಿಯ ಉಸ್ತುವಾರಿ, ಉತ್ತಮ ಆಡಳಿತ ನಿರ್ವಹಣೆಯಿಂದ ರೈತ ಉತ್ಪಾದಕ ಸಂಸ್ಥೆಯನ್ನು ಒಂದು ಬಲಿಷ್ಠ ಸಂಸ್ಥೆಯನ್ನಾಗಿ ಮಾಡಬಹುದು.
- ✶ ಕಾನೂನು ಅನುಸರಣೆ ಹಾಗೂ ಆರ್ಥಿಕ ತಃಖ್ತೆಗಳನ್ನು ಸರಿಯಾಗಿ ನಿರ್ವಹಿಸಿಕೊಂಡು ಬಂದಲ್ಲಿ ಸಂಸ್ಥೆಗೆ ಹೆಚ್ಚಿನ ಅನುದಾನದ ಸಂಗ್ರಹಣೆ ಮಾಡಬಹುದಾಗಿದೆ.
- ✶ ಉತ್ತಮ ಪಾರದರ್ಶಕತೆ ಮತ್ತು ಹೊಣೆಗಾರಿಕೆಗೆ ಕೊಡುಗೆ ನೀಡುತ್ತದೆ.
- ✶ 'ಬೇರೆ ಸಂಸ್ಥೆಗಳು ಹಾಗೂ ಖರೀದಿದಾರರೊಡನೆ' ಒಪ್ಪಂದಗಳನ್ನು ಮಾಡಿಕೊಂಡು ವ್ಯವಹಾರ ನಡೆಸಬಹುದಾಗಿದೆ.

ಕಾನೂನು ಅನುಸರಣೆಯ ಅಗತ್ಯತೆ ಮತ್ತು ಅದರಿಂದ ಆಗುವ ಅನುಕೂಲಗಳ ಬಗ್ಗೆ ಸ್ಪಷ್ಟತೆಯ ನಂತರ ಮುಂದಿನ ಅಧ್ಯಾಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳು ಅನುಸರಿಸಬೇಕಾದ ಕಾನೂನುಗಳ ಬಗ್ಗೆ ತಿಳಿಯೋಣ



## 2

# ಕಂಪನಿ ಕಾಯ್ದೆ – 2013 ರ ಅಡಿಯಲ್ಲಿ ನೊಂದಣಿಯಾದ ರೈತ ಉತ್ಪಾದಕ ಸಂಸ್ಥೆಗಳು ಅನುಸರಿಸಬೇಕಾಗಿರುವ ಕಾನೂನು ಅನುಸರಣೆಗಳು

**ಅಧಿವೇಶನದ ಉದ್ದೇಶ:**




**ಕಂಪನಿ ಕಾಯ್ದೆಯಡಿ ಕಾನೂನು ಅನುಸರಣೆಗಳ ಬಗ್ಗೆ ಅರಿತುಕೊಳ್ಳುವುದು**

**ವಿಷಯ ಸೂಚಿ:**


1.ಉತ್ಪಾದಕ ಕಂಪನಿಯ ಕಾನೂನು ಅನುಸರಣೆಗಳು

### ನೋಂದಣಿ ಕಾಯಿದೆಯಡಿ ಕಾನೂನು ಅನುಸರಣೆ


ಈ ಅಧಿವೇಶನದಲ್ಲಿ ಕಂಪನಿ ಕಾಯ್ದೆ – 2013 ಅಡಿಯಲ್ಲಿ ನೊಂದಣಿಯಾದ ರೈತ ಉತ್ಪಾದಕ ಸಂಸ್ಥೆಗಳು ಅನುಸರಿಸಬೇಕಾದ ಎಲ್ಲಾ ಕಾನೂನು ಅನುಸರಣೆಗಳನ್ನು ತಿಳಿದುಕೊಳ್ಳೋಣ ಅಗತ್ಯವಿರುವ ಅನುಸರಣೆಗಳನ್ನು ನಿಗಧಿತ ಸಮಯದಲ್ಲಿ ಅನುಸರಿಸುವುದು ಅತಿ ಮುಖ್ಯ ಇಲ್ಲವಾದರೆ ದಂಡಗಳನ್ನು ಕಟ್ಟಬೇಕಾಗುತ್ತದೆ.



## ಕೋಷ್ಟಕ 1. ಉತ್ಪಾದಕ ಕಂಪನಿಗಳ ಕಾನೂನು ಅನುಸರಣೆಗಳ ಕ್ಯಾಲೆಂಡರ್

| ಕ್ರ ಸಂ. | ಅನುಸರಣೆಗಳು | ವಿವರಗಳು | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ಜನವರಿ | ಫೆಬ್ರವರಿ | ಮಾರ್ಚ್ |
|---|---|---|---|---|---|---|---|---|---|---|---|---|---|---|
| 1. | ಆಡಳಿತ ಮಂಡಳಿಯ ಸಭೆ  | ಒಂದು ವರ್ಷದಲ್ಲಿ ಕನಿಷ್ಠ 4 (ಮೂರು ತಿಂಗಳಿಗೊಮ್ಮೆ) | | | | | | | | | | | | |
| 2. | ಶಾಸನಬದ್ದ ಲೆಕ್ಕಪರಿಶೋಧನೆ  | ಪ್ರತಿ ಆರ್ಥಿಕ ವರ್ಷಕ್ಕೊಮ್ಮೆ | | | | | | | | | | | | |
| 3. | ವಿಶೇಷ ಲೆಕ್ಕಪರಿಶೋಧನೆ   | ಕಂಪನಿ ರಿಜಿಸ್ಟ್ರಾರ್ ಕೇಳಿಕೊಂಡಾಗ | | | | | | | | | | | | |
| 4. | ವಾರ್ಷಿಕ ಸಾಮಾನ್ಯ ಸಭೆ (AGM)  | ಹಣಕಾಸು ವರ್ಷವು ಮುಗಿದ 6 ತಿಂಗಳ ಒಳಗಾಗಿ (ಸೆಪ್ಟೆಂಬರ್ 30 ರೊಳಗೆ) | | | | | | | | | | | | |
| 5. | ಆಡಳಿತ ಮಂಡಳಿಯ ಸದಸ್ಯರ ಆಯ್ಕೆ  | ಪ್ರತಿ ವರ್ಷ, ಮೂರನೇ ಒಂದು ಭಾಗದಷ್ಟು | | | | | | | | | | | | |

| ಕ್ರ ಸಂ. | ಅನುಸರಣೆಗಳು | ವಿವರಗಳು | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ಜನವರಿ | ಫೆಬ್ರವರಿ | ಮಾರ್ಚ್ |
|---|---|---|---|---|---|---|---|---|---|---|---|---|---|---|
| 6. | ವಾರ್ಷಿಕ ಆದಾಯ ವರದಿಯನ್ನು ಕಂಪನಿ ರಿಜಿಸ್ಟ್ರಾರ್‌ಗೆ (ಆರ್‌ಓಸಿ) ಸಲ್ಲಿಸುವಿಕೆ  | ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಿಂದ 30 ದಿನಗಳೊಳಗೆ | | | | | | | | | | | | |
| 7. | ಸಾಮಾನ್ಯ ಮೀಸಲು ನಿಧಿ  | ವರ್ಷಕ್ಕೊಮ್ಮೆ | | | | | | | | | | | | |
| 8. | ಪರಿಶೋಧಕರ ನೇಮಕ  | ವಾರ್ಷಿಕ ಸಾಮಾನ್ಯ ಸಭೆಯಲ್ಲಿ | | | | | | | | | | | | |
| 9. | ಸರಕು ಮತ್ತು ಸೇವಾ ತೆರಿಗೆ ಸಲ್ಲಿಸುವಿಕೆ  | ಪ್ರತಿ ತಿಂಗಳು ವರ್ಷಕ್ಕೆ 12 ಬಾರಿ | | | | | | | | | | | | |

| ಕ್ರ ಸಂ. | ಅನುಸರಣೆಗಳು | ವಿವರಗಳು | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ಜನವರಿ | ಫೆಬ್ರವರಿ | ಮಾರ್ಚ್ |
|---|---|---|---|---|---|---|---|---|---|---|---|---|---|---|
| 10. | **ಅಸಾಧಾರಣ ಸಾಮಾನ್ಯ ಸಭೆ**  | ಅಗತ್ಯಕ್ಕೆ ಅನುಗುಣವಾಗಿ | | | | | | | | | | | | |
| 11. | **ಶಾಸನಬದ್ದ ದಾಖಲೆಗಳ ನಿರ್ವಹಣೆ**  | ಎಲ್ಲಾ ಸಮಯದಲ್ಲೂ | | | | | | | | | | | | |

**ಚಟುವಟಿಕೆ:** ಈಗ ನಾವು ನಮ್ಮ ರೈತ ಉತ್ಪಾದಕ ಸಂಸ್ಥೆಯಲ್ಲಿ ಎಲ್ಲಾ ಕಾನೂನು ಅನುಸರಣೆಗಳನ್ನು ಮೇಲೆ ತಿಳಿಸುವಂತೆ ಪಾಲಿಸುತ್ತಿದ್ದೆವೆಯೇ ಎಂದು ಮೌಲ್ಯ ಮಾಪನ ಮಾಡೋಣ ಇಲ್ಲದಿದ್ದರೆ, ನಿಗಧಿತ ಸಮಯದಲ್ಲಿ ಕಾನೂನು ಅನೂಸರಣೆ ಮಾಡಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಗುರಿತಿಸೋಣ.

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

## ಅಪರಾಧಗಳು ಹಾಗೂ ದಂಡಗಳು

ಕಂಪನಿ ಕಾಯ್ದೆ ಅಡಿಯಲ್ಲಿ ವಿವಿಧ ಅಪರಾಧಗಳಿಗೆ ನಿರ್ದಿಷ್ಟ ಪಡಿಸಿರುವ ದಂಡಗಳ ವಿವರಗಳನ್ನು ಕೆಳಗಿನ ಕೋಷ್ಟಕ 2 ರಲ್ಲಿ ನೀಡಲಾಗಿದೆ;

**ಕೋಷ್ಟಕ 2: ಅಪರಾಧಗಳು ಹಾಗೂ ದಂಡಗಳು**

| ಕ್ರ ಸಂ. | ಅಪರಾಧಗಳು | ದಂಡಗಳು |
|---|---|---|
| 1. | ಆಡಳಿತ ಮಂಡಳಿಯ ಯಾವುದೇ ಸದಸ್ಯರು ಉತ್ಪಾದಕ ಕಂಪನಿಯ ವ್ಯವಹಾರದೊಂದಿಗೆ ಸಂಘರ್ಷವಾಗಬಹುದಾದ ವ್ಯವಹಾರದಲ್ಲಿ ತೊಡಗಿ ಕೊಂಡಿದ್ದರೆ ಅಥವಾ ವ್ಯಯಕ್ತಿಕ ಹಿತಾಸಕ್ತಿಯನ್ನು ಹೊಂದಿದ್ದರೆ | ಎಓಎ ಅನುಸಾರ ಸದಸ್ಯತ್ವ ರದ್ದಾಗುತ್ತದೆ ಸದಸ್ಯತ್ವದಿಂದ ತೆಗೆದುಹಾಕಲಾಗುತ್ತದೆ. |
| 2. | ಯಾವುದೇ ನಿರ್ದೇಶಕರು ಕಾನೂನಿನ ನಿಬಂಧನೆಗಳ ಅಥವಾ ಇನ್ನಾವುದೇ ಕಾನೂನಿನ ವಿರುದ್ಧವಾಗಿ ಮತ ಚಲಾಯಿಸದರೆ, ತಿರ್ಮಾನಗಳಿಗೆ ಅನುಮೋಧನೆ ನೀಡಿದರೆ | ಅಂತಹ ನಿರ್ದೇಶಕರು ಸಂಸ್ಥೆಗೆ ಆದ ನಷ್ಟ, ಹಾನಿ ಅಥವಾ ಪಡೆದ ಲಾಭದ ಮೊತ್ತವನ್ನು ಸಂಸ್ಥೆಗೆ ಪಾವತಿಸಬೇಕಾಗುತ್ತದೆ. |
| 3. | ಕಂಪನಿಯ ವ್ಯವಹಾರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸದಸ್ಯರಿಗೆ ಅಥವಾ ಅಧಿಕೃತ ವ್ಯಕ್ತಿಗೆ ನೀಡಲು ನಿರ್ದೇಶಕರು ವಿಫಲವಾದರೆ | ಹಿಂದಿನ ವರ್ಷದ ಕಂಪನಿಯ ವಹಿವಾಟಿನ ಶೇ.5 ರ ತನಕ ದಂಡ. |
| 4. | ಯಾವುದೇ ಆಡಳಿತ ಮಂಡಳಿಯ ಸದಸ್ಯ/ಸದಸ್ಯರು ಉತ್ಪಾದಕ ಕಂಪನಿಯ ಲೆಕ್ಕಪತ್ರಗಳು ದಾಖಾಲಾತಿಗಳು ಮತ್ತು ಕಂಪನಿಯ ಆಸ್ತಿಗಳನ್ನು ಕಂಪನಿಗೆ ಹಸ್ತಾಂತರಿಸಲು ವಿಫಲವಾದರೆ | ರೂ. 1 ಲಕ್ಷದವರೆಗೆ ದಂಡ ಮತ್ತು ಸಲ್ಲಿಸಲು ವಿಳಂಬ ಮಾಡಿದ ಪ್ರತಿ ದಿನಕ್ಕೆ ರೂ.10,000ಗಳ ದಂಡ. |
| 5. | ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ವಿಫಲವಾದರೆ | ರೂ 1 ಲಕ್ಷದವರೆಗೆ ದಂಡ ಮತ್ತು ವಿಳಂಬ ಮಾಡಿದ ಪ್ರತಿ ದಿನಕ್ಕೆ ರೂ. 10,000ಗಳ ದಂಡ |
| 6. | ಉತ್ಪಾದಕ ಕಂಪನಿಯನ್ನು ನೊಂದಾಯಿಸಿದ ಒಂದು ವರ್ಷಗೊಳಗೆ ಕಂಪನಿಯ ವ್ಯವಹಾರವನ್ನು ಪ್ರಾರಂಭಿಸಲು ವಿಫಲವಾದರೆ | ಸತ್ಯಾ ಸತ್ಯತೆಗಳ ಬಗ್ಗೆ ವಿಚಾರಣೆ ನಡೆಸಿ ಹಾಗೂ ವಿಚಾರಣೆಯ ನಂತರ ನಿರ್ದೇಶಕ ಮಂಡಳಿಗೆ ಸಮಂಜಸವಾದ ಅವಧಿಯ ಅವಕಾಶವನ್ನು ನೀಡುವುದು ಆದಾಗ್ಯೂ, ವ್ಯವಹಾರವನ್ನು ಪ್ರಾರಂಭಿಸದ್ದಿರೆ ಕಂಪನಿಯನ್ನು ರದ್ದುಗೊಳಿಸ ಬಹುದಾಗಿದೆ |
| 7. | ಉತ್ಪಾದಕ ಕಂಪನಿಯು ತನ್ನ ಸದಸ್ಯರೊಂದಿಗೆ ವ್ಯವಹಾರವನ್ನು ನಡೆಸಲು ನಿಲ್ಲಿಸಿದರೆ | ಸತ್ಯಾ ಸತ್ಯತೆಗಳ ಬಗ್ಗೆ ವಿಚಾರಣೆ ನಡೆಸಿ ಹಾಗೂ ವಿಚಾರಣೆಯ ನಂತರ ನಿರ್ದೇಶಕ ಮಂಡಳಿಗೆ ಸಮಂಜಸವಾದ ಅವಧಿಯ ಅವಕಾಶವನ್ನು ನೀಡುವುದು ಆದಾಗ್ಯೂ, ವ್ಯವಹಾರವನ್ನು ಪ್ರಾರಂಭಿಸದ್ದಿರೆ ಕಂಪನಿಯನ್ನು ರದ್ದುಗೊಳಿಸ ಬಹುದಾಗಿದೆ |

| ಕ್ರ ಸಂ. | ಅಪರಾಧಗಳು | ದಂಡಗಳು |
|---|---|---|
| 8. | ಉತ್ಪಾದಕ ಕಂಪನಿಯ ಕಾಯ್ದೆಯಡಿಯಲ್ಲಿ ನೊಂದಾಹಿತವಾದ ಕಂಪನಿಯ ತನ್ನ ಎಓಎ ನಲ್ಲಿ ನಿರ್ಧಿಷ್ಟಪಡಿಸಿದ ಚಟುವಟಿಕೆಗಳನ್ನು ಕೈಗೊಳ್ಳದಿದ್ದರೆ | ಸತ್ಯಾ ಸತ್ಯತೆಗಳ ಬಗ್ಗೆ ವಿಚಾರಣೆ ನಡೆಸಿ ಹಾಗೂ ವಿಚಾರಣೆಯ ನಂತರ ನಿರ್ದೇಶಕ ಮಂಡಳಿಗೆ ಸಮಂಜಸವಾದ ಅವಧಿಯ ಅವಕಾಶವನ್ನು ನೀಡುವುದು ಆದಾಗ್ಯೂ, ವ್ಯವಹಾರವನ್ನು ಪ್ರಾರಂಭಿಸದ್ದಿರೆ ಕಂಪನಿಯನ್ನು ರದ್ದುಗೊಳಿಸ ಬಹುದಾಗಿದೆ |
| 9. | ಪರಸ್ಪರ ಸಹಕಾರ ಮತ್ತು ಸಹಾಯದ ತತ್ವಗಳನ್ನು ಕಂಪನಿಯು ಅಳವಡಿಸಿಕೊಳ್ಳಲು ವಿಫಲವಾದರೆ | ಸತ್ಯಾ ಸತ್ಯತೆಗಳ ಬಗ್ಗೆ ವಿಚಾರಣೆ ನಡೆಸಿ ಹಾಗೂ ವಿಚಾರಣೆಯ ನಂತರ ನಿರ್ದೇಶಕ ಮಂಡಳಿಗೆ ಸಮಂಜಸವಾದ ಅವಧಿಯ ಅವಕಾಶವನ್ನು ನೀಡುವುದು ಆದಾಗ್ಯೂ, ವ್ಯವಹಾರವನ್ನು ಪ್ರಾರಂಭಿಸದ್ದಿರೆ ಕಂಪನಿಯನ್ನು ರದ್ದುಗೊಳಿಸ ಬಹುದಾಗಿದೆ |

ಕಂಪನಿ ಕಾಯ್ದೆಯಲ್ಲಿ ಕಾಲಕಾಲಕ್ಕೆ ಆಗುವ ಬದಲಾವಣೆಗಳ ಅನೂಸಾರ ಕಾನೂನಿನ ಅನುಸರಣೆಗಳು ಹಾಗೂ ದಂಡಗಳು ಬದಲಾಗಬಹುದು ಹೀಗಾಗಿ ಕಾಲಕಾಕ್ಕೆ ಎಲ್ಲಾ ಅನುಸರಣೆಗಳನ್ನು ಖಚಿತಪಡಿಸಿಕೊಳ್ಳಲು ನಿರ್ದೇಶಕ ಮಂಡಳಿಯ ನೊಂದಾಯಿತ ಕಂಪನಿ ಕಾರ್ಯದರ್ಶಿಗಳ ಸೇವೆಯನ್ನು ತೆಗೆದುಕೊಳ್ಳಬೇಕು



# 3

# ಕಾನೂನಾತ್ಮಕ ಪರವಾನಗಿಗಳೂ ಮತ್ತು ದಾಖಲೆಗಳು

## ಅಧಿವೇಶನದ ಉದ್ದೇಶ:



ರೈತ ಉತ್ಪಾದಕ ಸಂಸ್ಥೆಗಳಿಗೆ ಅಗತ್ಯವಿರುವ ವಿವಿಧ ರೀತಿಯ ಕಾನೂನು ಪರವಾನಗಿಗಳು ಮತ್ತು ದಾಖಲೆಗಳ ಬಗ್ಗೆ ತಿಳಿದುಕೊಳ್ಳುವುದು.

**ಪರಿವಿಡಿ**

1.ಕಾನೂನಾತ್ಮಕ ಪರವಾನಗಿಗಳೂ ಮತ್ತು ದಾಖಲೆಗಳು


2.ನಿರ್ವಹಿಸಬೇಕಾದ ಶಾಸನ ಬದ್ಧ ದಾಖಲಾತಿಗಳು


## ಕಾನೂನು ಪರವಾನಗಿಗಳು / ಅನುಮತಿಗಳು

ನೋಂದಾಯಿತ ಸಂಸ್ಥೆಯಾಗಿ ಕಾನೂನುಗಳ ಅನುಸರಣೆಗಳ ಜೋತೆಯಲ್ಲಿ ಈ ಕೆಳಕಂಡ ಪರವಾನಗಿಗಳು ಮತ್ತು ದಾಖಲೆಗಳನ್ನು ರೈತ ಉತ್ಪಾದಕ ಸಂಸ್ಥೆಗಳು ತಮ್ಮ ವ್ಯವಹಾರವನ್ನು ಮಾಡಲು ಹೊಂದಿರಬೇಕು



## ಕೋಷ್ಟಕ 3: ಕಾನೂನು ಪರವಾನಗಿಗಳು ಮತ್ತು ದಾಖಲೆಗಳು

| ಕ್ರ ಸಂ. | ವ್ಯವಹಾರ/ಚಟುವಟಿಕೆ | ಅಗತ್ಯವಿರುವ ಪರವಾನಗಿ | ನೀಡುವ ಪ್ರಾಧಿಕಾರ/ಸಂಸ್ಥೆ |
|---|---|---|---|
| 1. | ಪರಿಕರಗಳ ವ್ಯಾಪಾರ   ಬಿತ್ತನೆ ಬೀಜ | ಬೀಜೋತ್ಪಾದನೆ ಮತ್ತು ಮಾರಾಟ ಪರವಾನಗಿ<br>ಬೀಜ ಪ್ರಮಾಣೀಕರಣ ಪರವಾನಗಿ | ಕೃಷಿ ಇಲಾಖೆ, ರಾಜ್ಯ ಬೀಜ ಪ್ರಮಾಣಿಕರಣ ಸಂಸ್ಥೆ |
| 2. | ಕೃಷಿ ಪರಿಕರಗಳ ಅಂಗಡಿ | ರಸಗೊಬ್ಬರಗಳು ಮತ್ತು ಕೀಟನಾಶಕಗಳ ಮಾರಾಟ ಪರವಾನಗಿಗಳು | ಕೃಷಿ ಇಲಾಖೆ, ಕಾರ್ಮಿಕ ಇಲಾಖೆ ಅಂಗಡಿ ಮತ್ತು ಮುಂಗಟ್ಟು ಕಾಯ್ದೆ |
| 3. | ಖರೀದಿ ಸಂಗ್ರಹಣೆ ಮತ್ತು ಮಾರಾಟ   ಸಂಗ್ರಹಣೆ | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪರವಾನಗಿಗಳು | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷಿ ಮಾರುಕಟ್ಟೆ ಇಲಾಖೆ |
| 4. | ಗುಣಮಟ್ಟ | ಅಗ್ ಮಾರ್ಕ್ ಪ್ರಮಾಣ ಪತ್ರ | ಮಾರುಕಟ್ಟೆ ಮತ್ತು ಪರಿಶೀಲನಾ ನಿರ್ದೇಶನಾಲಯ, ಕೃಷಿ ಮತ್ತು ರೈತ ಕಲ್ಯಾಣ ಇಲಾಖೇ ಭಾರತ ಸರ್ಕಾರ |
| 5. | ಸಂಗ್ರಹಣೆ | ಗೋಧಾಮುಗಳಲ್ಲಿ ಆಹಾರ ಉತ್ಪನ್ನಗಳ ಸಂಗ್ರಹಣೆಯಲ್ಲಿ ಕಾನೂನಿನ ಅನುಸರಣೆಗಳು ಆಹಾರ ಧಾನ್ಯ ಪರವಾನಗಿ | ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧೀಕಾರ, ರಾಜ್ಯ ಉಗ್ರಾಣ ನಿಗಮ, ನಾಗರಿಕ ಸರಬರಾಜು ನಿಗಮ |
| 6. | ಮಾರಾಟ | ತೂಕ ಮತ್ತು ಅಳತೆ ಪರವಾನಗಿ | ನಾಗರಿಕ ಸರಬರಾಜು ನಿಗಮ |

| ಕ್ರ ಸಂ. | ವ್ಯವಹಾರ/ಚಟುವಟಿಕೆ | ಅಗತ್ಯವಿರುವ ಪರವಾನಗಿ | ನೀಡುವ ಪ್ರಾಧಿಕಾರ/ಸಂಸ್ಥೆ |
|---|---|---|---|
| 7. | ಆಹಾರ ಸಂಸ್ಕರಣೆ   | ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರದ (ಎಫ್.ಎಸ್.ಎಸ್.ಎ.ಐ) ಪರವಾನಗಿ | ಆರೋಗ್ಯ ಮತ್ತು ಕುಂಟುಬ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ |
| 8. | ಮಾಲಿನ್ಯಕಾರಕ ಉದ್ಯಮ, ಸೂಕ್ಷ್ಮ, ಸಣ್ಣ ಮಾಧ್ಯಮ ಉಧ್ಯಮಗಳು (ಎಂಎಸ್ಎಂಇ) | ಮಾಲಿನ್ಯ ನಿಯಂತ್ರಣ ಹಾಗೂ ಎಂಎಸ್ಎಂಇ ಪ್ರಮಾಣ ಪತ್ರ | ಕೈಗಾರಿಕಾ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ |
| | | ನೀರಿನ ಬಳಕೆಯ ಅನುಮತಿ | ಗ್ರಾಮ ಪಂಚಾಯಿತಿ |
| | | ವಿದ್ಯುತ್ ಬಳಕೆಯ ಅನುಮತಿ | ವಿದ್ಯುತ್ ಇಲಾಖೆ |
| | | ಅಗ್ನಿಶಾಮಕ ಇಲಾಖೆಯ ಅನುಮತಿ | ಅಗ್ನಿಶಾಮಕ ಇಲಾಖೆ |
| 9. | ವ್ಯಾಪಾರ / ಸೇವೆಗಳು   ಸರಕು ಮತ್ತು ಸೇವೆಗಳ ವಹಿವಾಟಿನ ಮೇಲೆ ತೆರಿಗೆ | ಸರಕು ಮತ್ತು ಸೇವಾ ತೇರಿಗೆ ನೋಂದಣಿ | ಕೇಂದ್ರಿಯ ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್ ಮಂಡಳಿ, ಹಣಕಾಸು ಸಚಿವಾಲಯ ಭಾರತ ಸರ್ಕಾರ |
| 10. | ಆಧಾಯ ತೆರಿಗೆ | ಪಾನ್ ಮತ್ತು ಟ್ಯಾನ್ ಸಂಖ್ಯೆ | ಆಧಾಯ ತೆರಿಗೆ ಇಲಾಖೆ |
| 11. | ಸಾವಯವ ಉತ್ಪನ್ನ  ಉತ್ಪಾದನೆ | ಸ್ಥಳೀಯ ಜನರ ಮತ್ತು ಪಾಲುದಾರ ಸಂಸ್ಥೆಗಳಿಂದ (ಪಿ.ಜಿ.ಎಸ್) ದೃಢೀಕರಣ ಪರವಾನಗಿ ನೀಡುವ ಇತರೆ ಸಂಸ್ಥೆಗಳಿಂದ ದೃಢೀಕರಣ | ಅಧಿಕೃತ ಏಜೆನ್ಸಿಗಳು (ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ) |

# ಮಾದರಿ ಪರವಾನಗಿಗಳು ಮತ್ತು ನೀಡುವ ಅಧಿಕಾರಿಗಳು

**1. ಬೀಜ ಪ್ರಮಾಣೀಕರಣ ಪರವಾನಗಿ**



BK Tag № 454954

PADDY

Kind: IR-64

Variety: Apr-05-01-526(A)-5670

Lot No.:

"Use of the seed after expiry of the validity period by any person is entirely at his risk and the holder of the certificate shall not be responsible for any damage to the buyer of seed. No one should purchase the seed if seal of the certification tag has been tampered with".

Name and Full Address of Certified seed Producer: M/s. Vasantha Seeds (V) Settipalem, (M) Vemulapally, Nalgonda (Dist.)

APSSCA HYDERABAD

CERTIFIED SEED

Class of Seed: 106420

Certificate No.:

Date of Issue of Certificate: 13-06-05

Date of Test: 06-06-05

Certificate Valid up to: 05-03-06

(Provided seed is stored under cool and dry environment)

Seed Certification Officer (Name and Place)

Validity of Certificate further extended up to

Seed Certification Officer (Name and Place)

**2. ಸಾವಯವ ಪ್ರಮಾಣೀಕರಣ**

PGS-INDIA ORGANIC

**3. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ ಪ್ರಾಧಿಕಾರ**

सत्यमेव जयते

MSME

MICRO, SMALL & MEDIUM ENTERPRISES

सूक्ष्म, लघु एवं मध्यम उद्यम

**4. ಗೋದಾಮಿನ ಪ್ರಾಧಿಕಾರ**

WDRA

Warehousing Development & Regulatory Authority

**5. ಆಹಾರ ಉತ್ಪನ್ನಗಳ ಪ್ರಾಧಿಕಾರ**

fssai

FOOD SAFETY AND STANDARDS AUTHORITY OF INDIA

*Inspiring Trust, Assuring Safe & Nutritious Food*

Ministry of Health and Family Welfare, Government of India

**6. ಕೃಷಿ ಗುಣಮಟ್ಟವನ್ನು ಉತ್ಪಾದಿಸುತ್ತದೆ**

भारत सरकार

AGMARK एगमार्क

GOVERNMENT OF INDIA

### 7. ಸರಕು ಸೇವಾ ತೆರಿಗೆ




### 8. ರೈತ ಉತ್ಪಾದಕರ ಸಂಸ್ಥೆ ಕಾರ್ಡ್




### 9. ರೈತ ಉತ್ಪಾದಕರ ಸಂಸ್ಥೆ ರಸಗೊಬ್ಬರ ಪರವಾನಗಿ

**FORM A-2**
**ACKNOWLEDGEMENT**
**(See clause 8(3))**

**NEW**

**Authorization Letter Number : CTR/36/ADA/FR/2018/23839**
**Date of issue : 28/12/2018**
**Valid up to : 27/12/2021**

1. Received from M/s. RAMASAMUDRAM MANDAL AGRICULTURAL PRODUCERS MUTUALLY AIDED CO-OPERATIVE FEDERATION LTD., RAMASAMUDRAM(V), RAMASAMUDRAM(M), PUNGANUR(DIV), CHITTOOR (DISTRICT).a complete memorandum of intimation along with Form "O", fee of Rs.2500/- by challan bearing No(s).21022853442018, Dt(s):14/08/2018.

2. This acknowledgement shall be deemed to be the letter of authorization entitling the applicant to carry on the business as applied for a period of 3 years from the date of issue of this Memo of acknowledgement unless suspended or revoked by the competent authority.

Date : 28/12/2018
Place : Punganur

Signature of Notified Authority

LETTER OF AUTHORIZATION TO CARRY ON THE BUSINESS OF SELLING OF FERTILIZERS AS A RETAIL DEALER IN GOVERNMENT OF ANDHRA PRADESH

M/s.RAMASAMUDRAM MANDAL AGRICULTURAL PRODUCERS MUTUALLY AIDED CO-OPERATIVE FEDERATION LTD., RAMASAMUDRAM(V), RAMASAMUDRAM(M), PUNGANUR(DIV), CHITTOOR(DISTRICT), is here by granted letter of authorization to carry on the business of selling fertilizers/bio fertilizers/Organic fertilizers in retail at the place specified below in the state of Andhra Pradesh subject to the terms and conditions specified below and to the provision of the Fertilizer (Control) Order,1985.

DESCRIPTION OF THE PLACE AND TYPE OF BUSINESS

| Place of business and personal responsible | Location of sale depot | Location of Godowns attached to sale depot | Type of Fertilizers | Source of Supply |
|---|---|---|---|---|
| 1 | 2 | 3 | 4 | 5 |
| M/s.RAMASAMUDRAM MANDAL AGRICULTURAL PRODUCERS MUTUALLY AIDED CO-OPERATIVE FEDERATION LTD., 6-57, Bajaar Street, Ramasamudram, Ramasamudram, Punganur, Chittoor.<br><br>Person Responsible List Enclosed | 6-57, Bajaar Street, Ramasamudram, Ramasamudram, Punganur, Chittoor.<br><br>(Godown also included) | Nil | List Enclosed | List Enclosed |

Seal :

Date : 28/12/2018

Place : Punganur

Signature of Notified Authority

## 10. ರೈತ ಉತ್ಪಾದಕರ ಸಂಸ್ಥೆ ಜಿಎಸ್‌ಟಿ ನೋಂದಣಿ ಪ್ರಮಾಣಪತ್ರ

सत्यमेव जयते

**Government of India**
**Form GST REG-06**
*[See Rule 10(1)]*

**Registration Certificate**

**Registration Number :** 37AAALR1612H1Z7

| | | | | | |
|---|---|---|---|---|---|
| 1. | **Legal Name** | RMS MANDAL AGRICULTURE PRODUCERS MUTUALLY | | | |
| 2. | **Trade Name, if any** | RMS MANDAL AGRICULTURE PRODUCERS MUTUALLY | | | |
| 3. | **Constitution of Business** | Local Authority | | | |
| 4. | **Address of Principal Place of Business** | 6-57, BAJAR STREET, RAMASAMUDRAM, Chittoor, Andhra Pradesh, 517325 | | | |
| 5. | **Date of Liability** | | | | |
| 6. | **Period of Validity** | From | 26/07/2018 | To | NA |
| 7. | **Type of Registration** | Regular | | | |
| 8. | **Particulars of Approving Authority** | | | | |

**Signature**

Validity unknown
Digitally signed by DS GOODS AND SERVICES TAX NETWORK 1
Date: 2018.07.26 00:19:34 IST

| | |
|---|---|
| Name | |
| Designation | |
| Jurisdictional Office | |
| 9. Date of issue of Certificate | 26/07/2018 |

Note: The registration certificate is required to be prominently displayed at all places of business in the State.

**ಚಟುವಟಿಕೆ:** ನಮ್ಮ ರೈತ ಉತ್ಪಾದಕರ ಕಂಪನಿಯಲ್ಲಿ ಅಗತ್ಯವಿರುವ ಎಲ್ಲಾ ಪರವನಗಿಗಳ ಬಗ್ಗೆ ವಿಮರ್ಶಿಸೋಣ.

| ಕ್ರ. ಸಂ. | ಚಟುವಟಿಕೆ | ಬೇಕಾಗಿರುವ ಪರವಾನಗಿ | ಲಭ್ಯತೆ (ಹೌದು/ಇಲ್ಲ) | ಪರವಾನಗಿ (ಚಾಲ್ತಿಯಲ್ಲಿದೆಯೆ/ ನವೀಕರಿಸಬೇಕೆ) |
|---|---|---|---|---|
| | | | | |
| | | | | |
| | | | | |

## ಶಾಸನಬದ್ಧ ದಾಖಲಾತಿಗಳು

ಕಂಪನಿಗಳ ಕಾಯ್ದೆ 2013 ರ ಪ್ರಕಾರ, ಪ್ರತಿ ನಿರ್ಮಾಪಕ ಕಂಪನಿಯು ಈ ಕೆಳಗಿನ ಶಾಸನಬದ್ಧ ದಾಖಲಾತಿಗಳನ್ನು ನಿರ್ವಹಿಸಬೇಕಾಗುತ್ತದೆ

ನಿರ್ಮಾಪಕ ಕಂಪನಿಯಲ್ಲಿ ನಿರ್ವಹಿಸಬೇಕಾದ ಶಾಸನಬದ್ಧ ದಾಖಲಾತಿಗಳು

1. ನಿರ್ದೇಶಕರು, ಸಿ.ಇ.ಒ., ಕಾರ್ಯದರ್ಶಿಗಳ ಕೆ.ವ್ಯ.ಸಿ, ದಾಖಲಾತಿಗಳು
2. ಆಡಳಿತ ಮಂಡಳಿ ಸಭೆಯ ಮತ್ತು ವಾರ್ಷಿಕ ಸಾಮಾನ್ಯ ಸಭೆಗಳ ಚರ್ಚೆ ಮತ್ತು ನಿರ್ಣಯಗಳ ಪುಸ್ತಕ
3. ಎ.ಒ.ಎ ಮತ್ತು ಎಂ.ಒ.ಎ ಗಳ ಮೂಲ ಪ್ರತಿಗಳು ಮತ್ತು ತಿದ್ದುಪಡಿತಂದ ಪ್ರತಿಗಳು
4. ಜವಬ್ದಾರಿಗಳ ರಿಜಿಸ್ಟರ್
5. ಷೇರುದಾರರ ಮಾಹಿತಿ ಪುಸ್ತಕ
6. ವಾರ್ಷಿಕ ಆದಾಯ, ಪ್ರಮಾಣ ಪತ್ರಗಳು ಮತ್ತು ಸಲ್ಲಿಕೆಗಳ ದಾಖಲಾತಿಗಳು
7. ಷೇರುದಾರರಿಗೆ ನೀಡಲಾಗಿರುವ ಲಾಭಾಂಶಗಳ ಘೋಷಣೆಗಳ ಮತ್ತು ತಡೆಹಿಡಿಯಲಾದ ಲಾಬಾಂಶಗಳ ರಿಜಿಸ್ಟರ್‌ಗಳು
8. ಸರಿಯಾದ ಲೆಕ್ಕಪತ್ರಗಳ ನಿರ್ವಹಣೆ, ಕಂಪನಿಯ ಸಾಲಗಳು, ಬಂಡವಾಳ ಹೂಡಿಕೆ ರಿಜಿಸ್ಟರ್
9. ಒಪ್ಪಂದಗಳ/ ಕರಾರು ದಾಖಲಾತಿಗಳು
10. ನಿರ್ದೇಶಕರು ಇತರೆ ಯಾವುದಾದರು ಸಂಸ್ಥೆಗಳಲ್ಲಿ ಅಥವಾ ಕಂಪನಗಳಲ್ಲಿ ಪಾಲುದಾರರಾಗಿರುವ ಮತ್ತು ಹೊಂದಿರುವ ಹುದ್ದೆಗಳ ಬಗ್ಗೆ ಮಾಹಿತಿ ಮತ್ತು ದಾಖಲಾತಿಗಳ ರಿಜಿಸ್ಟರ್
11. ನಿರ್ದೇಶಕರ ಮಾಹಿತಿ ಮತ್ತು ನಿರ್ದೇಶಕರ ಷೇರುಗಳ ರಿಜಿಸ್ಟರ್
12. ನವೀಕರಿಸಿದ ಮತ್ತು ನಕಲಿ ಪ್ರತಿಗಳು/ ಪರಾವನಗಿಗಳು/ಒಡಂಬಡಿಕೆಗಳು
13. ದಾಸ್ತಾನು ಮತ್ತು ಸ್ಥಿರಾಸ್ಥಿಗಳ ರಿಜಿಸ್ಟರ್
14. ಕೃಷಿ ಯಂತ್ರಗಳ ಬಳಸುವಿಕೆಯ ರಿಜಿಸ್ಟರ್
15. ಸಂದರ್ಶಕರ ರಿಜಿಸ್ಟರ್
16. ಮಾಹಿತಿಗಳ/ಪತ್ರ ವ್ಯವಹಾರಗಳ ಸ್ವೀಕೃತಿ ಮತ್ತು ಕಳುಹಿಸಲಾದ ದಾಖಲಾತಿಗಳು

# ಅಂತಿಮ ಸಮೀಕ್ಷೆ

ಈ ಕಲಿಕಾ ಮಾಡ್ಯೂಲಿನ ಪ್ರಾರಂಭದಲ್ಲಿ ನಾವು ಮೂಲ ಸಮೀಕ್ಷೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಕಾನೂನಾತ್ಮಕ ಅನುಸರಣೆಗಳಿಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳಿಗೆ ಉತ್ತರಿಸಿದ್ದೆವು.ಈಗ ಈ ಕಲಿಕಾ ಮಾಡ್ಯುಲಿನ ಅಂತಿಮಘಟ್ಟವನ್ನು ನಾವು ತಲುಪಿದ್ದೇವೆ. ಈ ಕಲಿಕಾ ಮಾಡ್ಯೂಲಿನಿಂದ ನಾವು ಪಡೆದ ಹೆಚ್ಚುವರಿ ತಿಳುವಳಿಕೆಯನ್ನು ಮತ್ತು ಜ್ಞಾನವನ್ನು ಸಮೀಕ್ಷಿಸಬೇಕಾಗಿದೆ. ಆದ್ದರಿಂದ ನಾವು ಈ ಕಲಿಕಾ ಮಾಡ್ಯೂಲಿನಿಂದ ಕಲಿತ ಕಲಿಕೆಗಳ ಆಧಾರದ ಮೇಲೆ ಕೆಲವು ಹೆಚ್ಚುವರಿ ಪ್ರಶ್ನೆಗಳಿಗೆ ಉತ್ತರಿಸೋಣ.

1. ರೈತ ಉತ್ಪಾದಕ ಸಂಸ್ಥೆ ಯಾವುದೇ ವ್ಯವಹಾರವನ್ನು ಮಾಡುತ್ತಿದ್ದರು ಕಡ್ಡಾಯವಾಗಿ ಹೊಂದಿರಬೇಕಾಗಿರುವ ಪರವಾನಗಿಗಳು / ದಾಖಲಾತಿಗಳು ಯಾವುವು?

---------------------------------------------------------------------------------------------------------

---------------------------------------------------------------------------------------------------------

---------------------------------------------------------------------------------------------------------

---------------------------------------------------------------------------------------------------------

2. ಕಾನೂನು ಅನುಸರಣೆಗಳನ್ನು ಮಾಡದಿದ್ದರೆ ಆಗುವ ಪರಿಣಾಮಗಳೇನೂ?

---------------------------------------------------------------------------------------------------------

---------------------------------------------------------------------------------------------------------

---------------------------------------------------------------------------------------------------------

---------------------------------------------------------------------------------------------------------

3. ಒಂದು ಉತ್ಪಾದಕ ಕಂಪನಿಯಲ್ಲಿ ಕಾನೂನಿನ ವಿಷಯಗಳಲ್ಲಿ ಸಂಭವಿಸಬಹುದಾದ ಸಂಭವನಿಯ ಅಪರಾಧಗಳು ಯಾವುವು?

---------------------------------------------------------------------------------------------------------

---------------------------------------------------------------------------------------------------------

---------------------------------------------------------------------------------------------------------

---------------------------------------------------------------------------------------------------------

**ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆಯ ಕುರಿತು ಇರುವ ಈ ಕಲಿಕಾ ಮಾಡ್ಯೂಲಿನಿಂದ ತೆಗೆದುಕೊಳ್ಳಬಹುದಾದ ಮುಖ್ಯ ಕ್ರಿಯಾ ಅಂಶಗಳು.**

ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆಯ ಕುರಿತು ಇರುವ ಈ ಕಲಿಕಾ ಮಾಡ್ಯೂಲಿನಿಂದ ತೆಗೆದುಕೊಳ್ಳಬಹುದಾದ ಮುಖ್ಯ ಕ್ರಿಯಾ ಅಂಶಗಳನ್ನು ಪಟ್ಟಿ ಮಾಡೋಣ.

# ಟಿಪ್ಪಣಿ

# ಗ್ರಂಥ ಋಣ


1. "ಸುಧರ್ಮ" ಲೀಗಲ್ ಕಾಂಪ್ಲಿಯೇನ್ಸ್ ಆಫ್ ಫಾರ್ಮಾರ್ ಪ್ರೊಡ್ಯೂಸರ್ ಆರ್ಗನೈಜೇಷನ್ – ಮಹಿಳಾ ಅಭಿವೃದ್ಧಿ ಸೊಸೈಟಿ, ಮಣಿಕೊಂಡ ಹೈದ್ರಾಬಾದ್, ತೆಲಂಗಾಣ ದಿಂದ ಪ್ರಕಟವಾದ ತರಬೇತಿ ಕೈಪಿಡಿ – 2019

2. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ – ಕಾನೂನಾತ್ಮಕ ಅನುಸರಣೆಗಳು – ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.

3. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ – ರೈತ ಉತ್ಪಾದಕ ಸಂಸ್ಥೆಗಳ ಒಂದು ಅವಲೋಕನ – ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.

4. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ –ರೈತ ಉತ್ಪಾದಕ ಸಂಸ್ಥೆಗಳ ವ್ಯವಹಾರ ಯೋಜನೆ– ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.

5. ಅಶೋಕ ಎಸ್. ಆಲೂರ ಹಾಗೂ ಇತರರು – ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಜೇಷನ್ಸ್ ಆ್ಯನ್ ಇನ್ನೋವೇಟಿವ್ ಇನ್ಸ್ಟಿಟ್ಯೂಷನಲ್ ಅಪ್ರೋಚ್ ಫಾರ್ ಕಲೆಕ್ಟಿವ್ ಆ್ಯಕ್ಷನ್ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ ಹಾಗೂ ನಬಾರ್ಡ್‌ನ ಪ್ರಕಟಣೆ – 2017.

6. ಆಲೂರ.ಎ.ಎಸ್., ರವೀಂದ್ರರ ರೆಡ್ಡಿ ಸಿ.ಎಚ್., ಗೌಡಾ ಸಿ.ಎಲ್. ಎಲ್. ರೆಡ್ಡಿ ಬಿ. ವ್ಹಿ., ರಾಯ್ ಕೆ.ಎನ್., ಪಾರ್ಥಸಾರಥಿ ರಾವ್ ಪಿ. ಹಾಗೂ ಸುನೀಲಕುಮಾರ ಎಸ್. (2008)ಬಿಲ್ಡಿಂಗ್ ಸ್ಟ್ರಾಂಗರ್ ಫಾರ್ಮರ್ಸ್ ಅಸೋಸಿಯೇಶನ್ಸ್, ಬೆಳೆ ಸುಧಾರಣೆ ಜಾಗತಿಕ ವಿಭಾಗ, ಅಂತರರಾಷ್ಟ್ರೀಯ ಅರೆಶುಷ್ಕ ಉಷ್ಣವಲಯಗಳ ಬೆಳೆ ಸಂಶೋಧನಾ ಕಂಪನಿ, ಪಟನ್‌ಚೆರು–502324, ಆಂಧ್ರಪ್ರದೇಶ.32 ಪುಟಗಳು

7. ಚಾಮಲಾ.ಎಸ್ (1990). ಎಸ್ಟ್ಯಾಬಿಶಿಂಗ್ ಎ–ಗ್ರೂಪ್; ಎ ಪಾರ್ಟಿಸಿಪೇಟಿವ್ಹ್ ಆಕ್ಷನ್ ಮಾಡಲ್ ಇನ್ ಎಸ್.ಚಾಮಲಾ ಮತ್ತು ಪಿ.ಡಿ. ಮಾರ್ಟನ್, ವರ್ಕಿಂಗ್ ಟುಗೆದರ್ ಫಾರ್ ಲ್ಯಾಂಡ್‌ಕೇರ್; ಗ್ರೂಪ್ ಮ್ಯಾನೇಜ್‌ಮೆಂಟ್ ಸ್ಕಿಲ್ಸ್ ಆಂಡ್ ಸ್ಟ್ರೆಟಜೀಸ್,ಪುಟಸಂಖ್ಯೆ 13–28, ಬ್ರಿಸ್‌ಬೇನ್, ಆಸ್ಟ್ರೇಲಿಯನ್ ಅಕಾಡೆಮಿ ಪ್ರೆಸ್.

# ಸಹಕಾರಿ ಮೌಲ್ಯಗಳು



ಸ್ವಸಹಾಯ





ಸ್ವಯಂ ಜವಾಬ್ದಾರಿ



ಪ್ರಜಾಪ್ರಭುತ್ವ




ಷೇರು ಬಂಡವಾಳ




ಸಮಾನತೆ




ಒಗ್ಗಟ್ಟು







## ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

ರಾಜ್ಯ ಮಟ್ಟದಲ್ಲಿ ರೈತ ಉತ್ಪಾದಕ ಸಂಸ್ಥೆಗಳಿಗೆ ಅವಶ್ಯಕವಿರುವ ಬೆಂಬಲ ಹಾಗೂ ಸಹಾಯ ನೀಡುವ ನಿಟ್ಟಿನಲ್ಲಿ ಒಂದು ಸಾಂಸ್ಥಿಕ ರಚನೆಯ ಅರಿವನ್ನು ಮನಗಂಡು ಕರ್ನಾಟಕ ಸರ್ಕಾರವು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಿದೆ. ಈ ಸಂಸ್ಥೆಯು ರಾಜ್ಯದಲ್ಲಿರುವ ರೈತ ಉತ್ಪಾದಕ ಸಂಸ್ಥೆಗಳಿಗೆ ಅವಶ್ಯಕವಿರುವ ಮಾರ್ಗದರ್ಶನ, ಸಾಮರ್ಥ್ಯ ಬಲವರ್ಧನೆ, ತಾಂತ್ರಿಕ ಮಾಹಿತಿ, ವ್ಯವಹಾರ ಅಭಿವೃದ್ಧಿ ಸಂಬಂಧ ಪಟ್ಟಂತೆ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಬೆಂಬಲ ಮತ್ತು ಸಹಕಾರ ನೀಡುವ ಮೂಲಕ ಈ ಸಂಸ್ಥೆಗಳ ಸದಸ್ಯ ರೈತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದೆ.

# ರೈತ ಉತ್ಪಾದಕ ಸಂಸ್ಥೆಗಳ ಕಾನೂನಾತ್ಮಕ ಅನುಸರಣೆಗಳು



## ಮಹಿಳಾ ಅಭಿವೃದ್ಧಿ ಸೊಸೈಟಿ – ಆಂಧ್ರ ಪ್ರದೇಶ (ಎಪಿಎಮ್ಎಎಸ್)

ಎಪಿಎಮ್ಎಎಸ್ ಒಂದು ರಾಷ್ಟ್ರ ಮಟ್ಟದ ಸರ್ಕಾರೇತರ ಸಂಪನ್ಮೂಲ ಸಂಸ್ಥೆಯಾಗಿದ್ದು ಸಂಸ್ಥೆಯು ಜನರ ಸಹಭಾಗಿತ್ವದ ಸಂಸ್ಥೆಗಳಾದ ಸ್ವಸಹಾಯ ಸಂಘಗಳು, ಸ್ವಸಹಾಯ ಸಂಘಗಳ ಒಕ್ಕೂಟಗಳು, ಸಹಕಾರಿ ಸಂಸ್ಥೆಗಳು, ರೈತ ಉತ್ಪಾದಕ ಸಂಸ್ಥೆಗಳು ಹಾಗೂ ಇತರೆ ಸಮುದಾಯ ಆಧಾರಿತ ಗುಂಪುಗಳ ಏಳಿಗೆಗಾಗಿ ಕಾರ್ಯಪ್ರವೃತ್ತವಾಗಿದೆ. ಈ ಸಂಸ್ಥೆಗಳು ಸ್ವಸಹಾಯ, ಪರಸ್ಪರ ಲಾಭ, ಅವರದೆ ಆದ ಜವಾಬ್ದಾರಿ ಹಾಗೂ ಸ್ವಾವಲಂಭನೆಯ ಮೌಲ್ಯಗಳನ್ನು ಆಧಾರದ ಮೇಲೆ ಕಾರ್ಯನಿರ್ವಹಿಸುವಂತಹ ಸಂಸ್ಥೆಗಳಾಗಿವೆ.

CENTER OF EXCELLENCE FOR FARMER PRODUCER ORGANIZATIONS

apmas 20 Years of Journey — Empowered Communities

ವಿನ್ಯಾಸ ಮತ್ತು ಮುದ್ರಣ: ಇಂಡಿಗೋ ಮಲ್ಟಿಮೀಡಿಯಾ, ಬೆಂಗಳೂರು (9738181827)